
ಅಚಲ



* ಕಬ್ಬಿನ ಗದ್ದೆಗಳಲ್ಲಿ
* ವೃತ್ತಿಪರ ಧಾತ್ರಿಯರು
* ಮಹಿಳಾ ಸ್ವಾತಂತ್ರ್ಯ
* ಸ್ನೇಹಮಯಿ (ಗಾರ್ಕಿಯ ಕಥೆ)
* ಮಹಿಳಾ ಹಕ್ಕುಗಳ ಪ್ರತಿಪಾದನೆ
* ಹಬ್ಬಗಳ ಅರ್ಥ, ಔಚಿತ್ಯ
* ಮಹಿಳೆ ಪ್ರಯೋಗ ಪಶುವೆ ?

ಸೆಪ್ಟೆಂಬರ್, 1986 ...ಳಾ ಅಧ್ಯಯನ ಕೇಂದ್ರ ಬೆಲೆ : 1-50

ಪ್ರಿಯ ಸಂಗಾತಿ,

ನಮ್ಮ ದೇಶ ಸ್ವಾತಂತ್ರ್ಯಗಳಿಸಿ ನಲವತ್ತು ವರ್ಷಗಳೇ ಸಂದಿವೆ. ಇದು ಎಂತಹ ಸ್ವಾತಂತ್ರ್ಯ? ಶೇಕಡ ಎಪ್ಪತ್ತಕ್ಕೂ ಹೆಚ್ಚು ಮಂದಿ ದಾರಿದ್ರ್ಯರೇಖೆಯ ಕೆಳಗಿರುವಾಗ ಆರ್ಥಿಕ ಸ್ವಾತಂತ್ರ್ಯ ಕನಸಲ್ಲವೆ? ದಿನ ದಿನವೂ ಕಾಣುತ್ತಿರುವ ಜಾತಿವೈಷಮ್ಯಗಳ ಫಲವಾದ ಹಿಂಸೆ, ಕಗ್ಗೊಲೆಗಳು—ವರ್ಗ ವೈಷಮ್ಯಗಳು ದೇಶ ಸಾಧಿಸಬೇಕಾಗಿರುವ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯಗಳು ಸುಲಭವಲ್ಲಿ ದಕ್ಕುವಂತಹುದಲ್ಲವೆಂಬುದನ್ನು ಹೆಚ್ಚು ಹೆಚ್ಚು ರುಜುವಾತುಪಡಿಸುತ್ತಿವೆ. ಕಂಪ್ಯೂಟರ್ ಯುಗಕ್ಕೆ ಹಾರುವ ಸಂಭ್ರಮದಲ್ಲಿರುವ ಜನತೆಯ ಸಾಂಸ್ಕೃತಿಕ ಚಿಂತನೆ ಗ್ರಾಭರಿ ಹುಟ್ಟಿಸುತ್ತದೆ: ಕಂದಾಚಾರದ, ಅಮೂರ್ತ, ಅಸಂಬದ್ಧ ಪದ್ಧತಿಗಳನ್ನು ಹೆಗಲಿಗೇರಿಸಿಕೊಳ್ಳುತ್ತಾ, ಜೊತೆ ಜೊತೆಗೆ ಡಿಸ್ಕೋ, ಕ್ಯಾಬರೆ, ಟಿ. ವಿ. ಸಂಸ್ಕೃತಿಯನ್ನು ಬಿಗಿಯಾಗಿ ಅಪ್ಪಿಕೊಂಡು ಚಪ್ಪರಿಸುತ್ತಾ ಹೊರಟಿರುವ ಜನಸಮುದಾಯ ತನ್ನ ದಾಸ್ಯ ಸಂಕೋಲೆಯನ್ನು ತಾನೇ ಹೆಚ್ಚು ಹೆಚ್ಚು ಬಿಗಿ ಪಡಿಸಿಕೊಂಡು ದುರಂತದತ್ತ ಧಾವಿಸುತ್ತಿದೆ.

ಈ ವೈರುಧ್ಯಗಳೆಲ್ಲದರ ನಡುವೆ ಮಹಿಳಾ ಸ್ವಾತಂತ್ರ್ಯ – ಸಮಾನತೆಯೆನ್ನುವುದು ಇವೆಲ್ಲಕ್ಕೂ ಹೊರತಾದ ಸ್ವತಂತ್ರ ಪರಿಕಲ್ಪನೆಯಾದರೂ ಆಗಿರಲು ಹೇಗೆ ಸಾಧ್ಯ? ಎರಡು ಶತಮಾನಗಳ ಕಾಲ ನಮ್ಮನ್ನು ದಾಸ್ಯದಲ್ಲಿ ಬಂಧಿಸಿದ ಬ್ರಿಟಿಷರನ್ನು ದೇಶದಿಂದ ಹೊರ ದೋಡಿಸುವ ಬೃಹತ್ ಹೋರಾಟದಲ್ಲಿ ಪುರುಷನೊಂದಿಗೆ ಸಮ ಸಮವಾಗಿ ಹೆಜ್ಜೆ ಹಾಕಿದ ಮಹಿಳಾ ಹೋರಾಟ ಇಂದು ತನ್ನ ಗತಿ ಮತ್ತು ಧೋರಣೆಯನ್ನು ರೂಪಿಸಿಕೊಳ್ಳುವುದರಲ್ಲಿ ಎತ್ತ ಸಾಗಿದೆ? ವರದಕ್ಷಿಣೆ, ಅತ್ಯಾಚಾರ, ಮಹಿಳಾ ದೌರ್ಜನ್ಯಗಳನ್ನು ಖಂಡಿಸುವ, ಪ್ರತಿಭಟಿಸುವಷ್ಟರಲ್ಲೇ ತೃಪ್ತವಾಗದೇ, ಇಂದಿನ ನಮ್ಮ ದೇಶದ ಅಗತ್ಯ ಮತ್ತು ಅನುಕೂಲತೆ ಗಳಿಗನುಗುಣವಾಗಿ ತನ್ನ ದಿಕ್ಕನ್ನು ರೂಪಿಸಿಕೊಳ್ಳಬೇಕಾಗಿದೆ. ಮತದಾನದ ಹಕ್ಕಿಗಾಗಿ, ಕಾನೂನು ಸಮ್ಮತ ಗರ್ಭಪಾತದ ಹಕ್ಕಿಗಾಗಿ, ಕಡೆಗೆ ರಾಜಕೀಯ ಹಕ್ಕುಗಳಿಗಾಗಿ ನಮ್ಮ ಪರದೇಶದ ಸೋದರಿಯರಂತೆ ನಾವು ಹೋರಾಟ ನಡೆಸಬೇಕಾಗಿಲ್ಲ, ನಿಜ. ಈ ಹಕ್ಕುಗಳು ಮೇಲ್ನೋಟಕ್ಕೆ ನಿರಾಯಾಸವಾಗಿ ಸಂವಿಧಾನದತ್ತವಾಗಿ ದೊರಕಿರುವಂತೆ ಕಂಡುಬಂದರೂ ಅವು ಕಾಗದದ ಮೇಲಷ್ಟೇ ಉಳಿದಿವೆ. ದೇಶದ ಅಷ್ಟೂ ಮಹಿಳಾಸಮುದಾಯಕ್ಕೆ ಅವು ಲಭ್ಯವಾಗಬೇಕಾದರೆ ಅದನ್ನು ಕುರಿತ ಜಾಗೃತಿ ಮತ್ತು ಪಡೆಯಲು ಅಗತ್ಯವಾದಂತಹ ಪರಿಸ್ಥಿತಿಯ ನಿರ್ಮಾಣಕ್ಕಾಗಿ ಹೋರಾಟ ನಡೆಸಬೇಕಾಗಿದೆ.

ದೇಶದ ಶೋಷಿತ ಸಮುದಾಯದ ಬಹು ದೊಡ್ಡ ಭಾಗ ಮಹಿಳೆಯಾದರೂ, ಅವಳು ತನ್ನಂತೆ ಶೋಷಣೆಗೊಳಗಾಗಿರುವ ಇತರ ಪುರುಷ ಬಾಂಧವರ ವಿಮೋಚನೆಗಾಗಿಯೂ ಚಿಂತಿಸದಿದ್ದಲ್ಲಿ ಅವಳ ಹೋರಾಟ ಏಕಮುಖವಾಗುತ್ತದೆ: ಬಲಹೀನವಾಗುತ್ತದೆ. ವಿಶ್ವದ ಹಲವಾರೆಡೆಗಳಲ್ಲಿ ತಮ್ಮ ನಾಡಿನ ವಿಮೋಚನೆಗಾಗಿ, ತಮ್ಮ ಅಸ್ತಿತ್ವಕ್ಕಾಗಿ ನಡೆಯುತ್ತಿರುವ ರಾಷ್ಟ್ರೀಯ ಆಂದೋಲನಗಳ ಜೊತೆಯಲ್ಲಿ ಸಾಗಿರುವ ಮಹಿಳಾ ಹೋರಾಟ ನಮಗೂ ಪಾಠವಾಗಬೇಕಾಗಿದೆ. ಹೋರಾಟದಲ್ಲಿ ತೊಡಗಿರುವ ಪುರುಷನೊಂದಿಗೆ ಭಾರತೀಯ ಮಹಿಳೆಯು ದುಡಿಯುವ, ಬದುಕುವ ಹಕ್ಕಿಗಾಗಿ, ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿ ಕೊಳ್ಳುವುದಕ್ಕಾಗಿ, ತನ್ಮೂಲಕ ರಾಷ್ಟ್ರದ ವಿಕಾಸಕ್ಕಾಗಿ ಹೋರಾಡಬೇಕಾಗಿದೆ. ಶತಮಾನ ಗಳಿಂದ ಪುರುಷಪ್ರಧಾನ ಸಮಾಜದ ಕಪಿಮುಷ್ಟಿಯಲ್ಲಿ ನರಳುತ್ತಿರುವ ಭಾರತೀಯ ಮಹಿಳೆ ತನ್ನ ಶತ್ರುವನ್ನು ಗುರುತಿಸಿಕೊಳ್ಳುವಾಗ ಎಡವದೆ, ಯಾರೊಬ್ಬರ ಕೈಗೊಂಬೆಯಾಗದೆ, ಸಾಂಪ್ರದಾಯಿಕ ಸಮಾಜದ ಮೌಲ್ಯಗಳ ವಿರುದ್ಧ ತನ್ನ ಖಡ್ಗವೆತ್ತಬೇಕು.

ಎನ್. ಗಾಯತ್ರಿ

ಸಂಪುಟ 1 ಸಂಚಿಕೆ 4

'ಅಚಲ'ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ.

ಎಂ.ಓ. ಮೂಲಕ ಚಂದಾ ಹಣ ಕಳುಹಿಸುವವರು ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು ; ಚಂದಾದರರು ತಮ್ಮ ವಿಳಾಸ ಬದಲಾಗಿದ್ದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್, ವೈಯಾಳಿಕಾವಲ್
ಬೆಂಗಳೂರು–560 003.

ಚಂದಾ ವಿವರ

ವಾರ್ಷಿಕ ಚಂದಾ : **10 ರೂ.**
ಬಿಡಿ ಪ್ರತಿ : **1–50 ರೂ.**
ವಿಶೇಷ ಪ್ರತಿ : **2–50 ರೂ.**

Printed at ILA Printers, 153 4th Main, 8th cross, Chamarajapet, Bangalore-18 and published by Dr. G. Ramakrishna on behalf of Jagruthi Mahila Adhyayana Kendra, 221, IV Main, Vyalikaval, BANGALORE-3

Editor : N. Gayathri

'ಅಚಲ'ದಲ್ಲಿ ಪ್ರಕಟವಾಗುವ ಲೇಖನಗಳು ನಿಮ್ಮನ್ನು ಚರ್ಚೆಗೆ ಆಹ್ವಾನಿಸುವುದಕ್ಕಾಗಿ. ನೀವು ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಿ. ಲೇಖಕರ ಅಭಿಪ್ರಾಯಗಳ ಪತ್ರಿಕೆಯ ಅಭಿಪ್ರಾಯಗಳೂ ಆಗಿರಬೇಕೆಂಬುದಿಲ್ಲ.

*   *   *

1901ರಲ್ಲಿ ಅಕ್ಷರಸ್ಥ ಪುರುಷರ ಸಂಖ್ಯೆ ಒಟ್ಟು ಪುರುಷರ ಸಂಖ್ಯೆಯಲ್ಲಿ ಶೇಕಡ 9.83 ಇದ್ದರೆ 1981ರಲ್ಲಿ ಇದು ಶೇಕಡ 46.6ಕ್ಕೆ ಏರಿತು. ಇದೇ ಅವಧಿಯಲ್ಲಿ ಸ್ತ್ರೀ ಅಕ್ಷರಸ್ಥರ ಸಂಖ್ಯೆ ಶೇಕಡ 0.69 ರಿಂದ ಶೇಕಡ 24.8ಕ್ಕೆ ಏರಿತು. ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ಇರುವ ಕಾಳಜಿಗೆ ಇದು ಕೈಗನ್ನಡಿ.

*   *   *

ಚರಿತ್ರೆಯಲ್ಲಿ ವೃತ್ತಿಪರ ಧಾತ್ರಿಯರು

ಗುರುದತ್

ಮಗು ಬದುಕುಳಿಯಲು ತಾಯಿಯ ಹಾಲು ಅತ್ಯಂತ ಅವಶ್ಯಕವೆಂಬುದನ್ನು ಎಲ್ಲ ಪ್ರಾಚೀನ ಸಮುದಾಯಗಳೂ ಮನಗಂಡಿದ್ದವು. ಪುರಾತನ ವೈದ್ಯಕೀಯ ಸಾಹಿತ್ಯದಲ್ಲಿ ಕ್ಷೀರಕಾರಕವೆಂದು ಹೇಳಲಾದ ಅನೇಕ ಗಿಡ ಮೂಲಿಕೆ, ಪಥ್ಯ, ವಿಧಿಗಳ ಉಲ್ಲೇಖಗಳಿವೆ. ಎಳೆಯ ಹಸುಳೆಗಳಿಗೆ ತಾಯಿ ಹಾಲು ಲಭ್ಯವಿಲ್ಲದಿದ್ದಾಗ ಅಪರೂಪದ ಸಂದರ್ಭಗಳಲ್ಲಿ ಮಾತ್ರ ಪ್ರಾಣಿಯ ಹಾಲನ್ನು ಕುಡಿಸುತ್ತಿದ್ದರು. 'ರೈತಾಪಿ ಜನರ ಒಟ್ಟು ಕುಟುಂಬಗಳಲ್ಲಿ ತಾಯಿ ತೀರಿಕೊಂಡರೆ ಆಕೆಯ ಹತ್ತಿರದ ಸಂಬಂಧಿಯೊಬ್ಬಳು ಮಗುವಿಗೆ ಹಾಲೂಡುವ ಸಂಪ್ರದಾಯ ಸಾಮಾನ್ಯವಾಗಿತ್ತು. ಆದರೆ ಹಾಲೂಡಿಕೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ವೃತ್ತಿಪರ ಧಾತ್ರಿಯರು ಚರಿತ್ರೆಯಲ್ಲಿ ಕಂಡು ಬರುವುದು ಸೋಜಿಗವಾದರೂ ಸತ್ಯವಾದ ಸಂಗತಿ.

ಪ್ರಾಚೀನ ಅವಿಭಕ್ತ ಸಮುದಾಯಗಳಲ್ಲಿ ವರ್ಗ ವಿಭಜನೆಯಾದಾಗ ಹಾಲೂಡಿಕೆಯನ್ನೇ ಜೀವನೋಪಾಯವನ್ನಾಗಿ ಮಾಡಿಕೊಂಡ ವೃತ್ತಿಪರ ಧಾತ್ರಿಯರ ಸೃಷ್ಟಿಯಾಗಿದ್ದಿರಬಹುದು ಎಂದೆನಿಸುತ್ತದೆ. ಕ್ರಿ.ಪೂ. 10ನೆಯ ಶತಮಾನದ ಹೋಮರನ ಗ್ರೀಕ್ ಸಮಾಜದಲ್ಲಾಗಲೇ ಧಾತ್ರಿಯರನ್ನು ಬಳಸಿಕೊಳ್ಳುವುದು ರೂಢಿಗೆ ಬಂದಿತ್ತು. ಕುಲೀನ ಮನೆತನಗಳಲ್ಲಿ ಅವರಿಗಾಗಿ ವಿಶೇಷ ಬೇಡಿಕೆಯಿತ್ತು, ಎಂದು ಧಾತ್ರಿಯ ಸಾಮಾಜಿಕ ಚರಿತ್ರೆಯನ್ನು ಗುರುತಿಸಿರುವ ಇಬ್ರಾಹಿಂ ಬರೆದಿದ್ದಾರೆ. ಆ ಮನೆತನಗಳಲ್ಲಿ ದಾದಿಯರಿಗೆ ಗೌರವದ ಸ್ಥಾನವಿತ್ತು. ಗುಲಾಮರು, ಮತ್ತಿತರ ಸೇವಕರೂ ಸಹ ಅವರ ಅಂಕೆಯಲ್ಲಿರುತ್ತಿದ್ದರು. ಅನೇಕ ವೇಳೆ ಈ ದಾದಿಯರು ಅವರ ಯಜಮಾನರ ಮಕ್ಕಳು ಪ್ರಾಯಕ್ಕೆ ಬರುವವರೆಗೂ ಅವರ ಲಾಲನೆ ಪಾಲನೆ ಮಾಡುತ್ತಿದ್ದರು. ಟೋಲೆಮಿ ಕಾಲದ ಗ್ರೀಸ್‌ನಲ್ಲಿ ಹೆಣ್ಣು ಗುಲಾಮರು ಧಾತ್ರಿಯರ ಸ್ಥಾನಕ್ಕೆ ಅರ್ಹತೆ ಪಡೆದರು. ರೋಮನ್ನರ ಕಾಲದಲ್ಲಿಯೂ ಧಾತ್ರಿಯರು ಸರ್ವೇಸಾಮಾನ್ಯವಾಗಿದ್ದು, ಆಗಿನ ವೈದ್ಯಕೀಯ ಸಾಹಿತ್ಯದಲ್ಲಿ ಅವರಿಗಿರಬೇಕಾದ ಗುಣಲಕ್ಷಣಗಳ ಚರ್ಚೆಯಿದೆ.

ಚರಕ ಸಂಹಿತೆಯಲ್ಲಿ (ಕ್ರಿ.ಪೂ.2ನೆಯ ಶತಮಾನ) ....ಮಗುವಿನ ಜಾತಿಗೆ ಸೇರಿದ, ಯೌವನದಲ್ಲಿರುವ ವಿಧೇಯಳಾಗಿರುವ, ಅಂಗಾಂಗಗಳ ಕೊರತೆಯಿರದ, ಅನಾರೋಗ್ಯಕರ ಚಾಳಿಗಳಿಲ್ಲದ.........ಅದೇ ನಾಡಿನವಳಾದ,........ಉತ್ತಮಕುಲದಲ್ಲಿ ಹುಟ್ಟಿದ, ಮಕ್ಕಳ ಬಗ್ಗೆ ಪ್ರೀತ್ಯಾದರವುಳ್ಳ, ಗಂಡು ಮಕ್ಕಳಿರುವ........ ಧಾತ್ರಿಯನ್ನು ತರಬೇಕು' ಎಂದು ಹೇಳಿದೆ. ಸುಶ್ರುತ ಸಂಹಿತೆ (ಕ್ರಿ.ಶ. 3-4ನೆಯ ಶತಮಾನ)ಯಲ್ಲಿ, '........ ಶಿಶುವಿನ ಜಾತಿಗೆ ಅನುಸಾರವಾಗಿರುವ, ಮಧ್ಯ ಶರೀರ ಪ್ರಮಾಣದ, ಮಧ್ಯಮ ವಯಸ್ಸಿನ, ನಿರೋಗಳಾದ, ಸುಶೀಲಳಾದ, ಶಾಂತ ಸ್ವಭಾವವುಳ್ಳ, ತಿಳಿಯಾದ ಹಾಲುಳ್ಳ, ಬದುಕಿರುವ ಮಗುವುಳ್ಳ......ಉತ್ತಮ ಕುಲದಲ್ಲಿ ಜನಿಸಿದ ಧಾತ್ರಿಯನ್ನೇ ಬಾಲಕನ ಆರೋಗ್ಯ, ಬಲವೃದ್ಧಿಗಾಗಿ ನೇಮಕ ಮಾಡಬೇಕು' ಎಂದಿದೆ. ಹೀಗೆ ಧಾತ್ರಿ-ಮಗು ನಡುವೆ ಆರೋಗ್ಯಕರ ಸಂಬಂಧ ಏರ್ಪಡಿಸುವ ಅವಶ್ಯಕತೆಯನ್ನು ಭಾರತೀಯ ವೈದ್ಯರು ಆಗಲೇ ಮನಗಂಡಿದ್ದರು. ಅಷ್ಟೇ ಅಲ್ಲದೆ ಧಾತ್ರಿಯ ಗುಣ ಪರೀಕ್ಷೆ ಮಾಡುವಾಗ, ನಮ್ಮ ಸಂಸ್ಕೃತಿಯ ವಿಶೇಷ ಪೂರ್ವಾಗ್ರಹ ಪೀಡೆ–ಜಾತಿಯು ಮುಖ್ಯವೆಂದು ಅವರು ಭಾವಿಸಿದ್ದರು.

ಮಕ್ಕಳ ಆರೋಗ್ಯ ಭಾಗ್ಯದ ಬಗ್ಗೆ ಕ್ರಿ.ಶ. 1184 ರ ಚೀಣಾದ ಒಂದು ಗ್ರಂಥ (ಹ್ಸಿಯಾವೊ ಎರ್ ವೈ ಪೊಗ್ ತ್ಸುಂಗ್ ವ್ಯೆ ಲುಂಗ್ ಫ್ಯಾಂಗ್) ಹೀಗೆ ಹೇಳುತ್ತದೆ : "ಸ್ವಂತ ತಾಯಂದಿರ ಹಾಲು ಕುಡಿಯುವ ಮಕ್ಕಳ ಬಗ್ಗೆ ಚರ್ಚಿಸಬೇಕಾದ್ದೇನೂ ಇಲ್ಲ. ಮಗು ದಾಯಿಯಿಂದ ಪೋಷಿತವಾಗಬೇಕಿದ್ದರೆ, ವ್ಯಾಧಿ ಪೀಡಿತಳಾದ, ಏದುಸಿರು ಬಿಡುವ, ಅಮೆಯಂಥ ಎದೆ

ಕಬ್ಬಿನ ಗದ್ದೆಗಳಲ್ಲಿ

ದೂರದ ಆ ಕಬ್ಬಿನ ಹೊಲಗದ್ದೆಗಳಲ್ಲಿ
ದೂರ ಕಡಲಿನ ಆ ದ್ವೀಪಗಳಲ್ಲಿ
ಅವರ ದಣಿದ ಕೈಕಾಲುಗಳು ಆಯಾಸದಿಂದ ಬಳಲುತ್ತಿವೆ
ಅವರ ಯಾತನೆಯ ಹೃದಯಗಳು ಹತಾಸೆಯಿಂದ ತುಂಬಿ ತುಳುಕುತ್ತಿವೆ
ಈ ಸರಳಾಟಕ್ಕೆ ಕೊನೆಯೆ ಇಲ್ಲವೆ ?
ಈ ನೋವಿಗೆ ಬಿಡುಗಡೆಯೆ ಇಲ್ಲವೆ ?
ಗಾಣಕ್ಕೆ ಕಟ್ಟಿರುವ ಎತ್ತುಗಳಂತೆ
ನಮ್ಮ ಸೋದರಿಯರು ಕಬ್ಬಿನಗದ್ದೆಗಳಲ್ಲಿ ಹೆಣಗುತ್ತಿದ್ದಾರೆ.

ನಿರ್ಗತಿಕ ಬಾಲೆಯರನ್ನು ಪಾರುಮಾರುಲು
ಪಿಶಾಚಿಯೇ ಮುಂದೆ ಬರುತ್ತಿರುವಾಗ
ಓ ದೇವರೆ. ನೀನು ಏಕೆ. ಎದ್ದು ಬರಲಾರೆ ?
ಅವರ ಕಣ್ಣೀರು ವ್ಯರ್ಥವಾಗಿ ಮಣ್ಣು ಸೇರುತ್ತಿದೆ

ದಕ್ಷಿಣದ ಸಾಗರಗಳ ದ್ವೀಪಗಳಲ್ಲಿ
ಆ ನಿಷ್ಕರುಣಿ ದ್ವೀಪಗಳಲ್ಲಿ
ಕಬ್ಬಿನ ಗದ್ದೆಗಳ ಕೊನೆಯಿರದ ಆ ನಿರ್ಜನತೆಯಲ್ಲಿ
ಹೃದಯಗಳು ಬಿರಿಯುವಂತೆ ಅವರು ಅಳುತ್ತಾರೆ

ದೂರಬಿಟ್ಟು ಬಂದಿರುವ ಮನೆಮಠಗಳ ಬಗ್ಗೆ
ಕನಸು ಕಾಣುತ್ತಾರೆ ಅವರು, ಬೇಡವೆ
ಮತ್ತೆಂದೂ ನೋಡಲಾರದ ತಮ್ಮ ತಾಯಂದಿರ ಬಗ್ಗೆ
ಪತಾಶರಾಗುತ್ತಾರೆ

ಓ ಗಾಳಿಯೆ, ಅವರ ಬೇಗುದಿಯ ಅಳುವನ್ನು ನೀನು ಕೇಳಿರುವೆಯಾ ?
ಓ ಗಾಳಿಯೆ, ಅವರ ನೋವಿನ ಕಣ್ಣೀರನ್ನು ನೀನು ನೋಡಿರುವೆಯಾ ?
ಓ ಗಾಳಿಯೆ. ದಯವಿಟ್ಟು ಅವರ ಸಂದೇಶವನ್ನು ನನಗೆ ಪಿಸುಗುಟ್ಟು
ಅಥವಾ ಅವರು ರೋದಿಸುವ ಶಕ್ತಿಯನ್ನೆ ಕಳೆದು ಕೊಂಡಿರುವರೆ ?

–ಸುಬ್ರಹ್ಮಣ್ಯ ಭಾರತಿ

ಕನ್ನಡಕ್ಕೆ : ಬಿ. ಎನ್. ಶಾಂತ

[ಮಾರಿಷಸ್‌ನ ಕಬ್ಬಿನ ಗದ್ದೆಗಳಲ್ಲಿ ದುಡಿಯುತ್ತಿರುವ ತಮಿಳು ಕಾರ್ಮಿಕರನ್ನು ಕುರಿತು ಬರೆದ ಕವಿತೆ]

ಕುಡಿಸಿ ಅವು ತಮ್ಮ ಹಾಲಿನಿಂದ ಕೊಬ್ಬಿ ಬೆಳೆದಿವೆಯೆಂದು ತೋರಿಸಿದರು. ಅಫೀಮಿನ ಧೃತಿ (ಲಾಡನಮ್) ಲೇಪಿಸಿದ ಸ್ತನಗಳಿಂದ ಹಾಲೂಡಿ ಮಕ್ಕಳನ್ನು ಸಾಂತ್ವನಗೊಳಿಸಿದರು; ಅಫೀಮಿನ ಚಟ ಹಿಡಿಸಿದರು. ಇವರಿಂದ ಲೈಂಗಿಕ ಸಂಬಂಧದ ಮೇಹರೋಗ ಮಕ್ಕಳಿಗೆ ದಾಟಿದ್ದನ್ನೂ ಗಮನಿಸಲಾಯಿತು. ಬಡವರ್ಗದ ಯುವತಿಯರು ಅನುಚಿತ ಸಂಬಂಧಗಳಿಂದ ಗರ್ಭಿಣಿಯರಾಗಿ ಮಗುವನ್ನು ಹಡೆದು, ಅದು ಹೇಗೋ 'ಕಳೆದು ಹೋಯಿತು' ಎಂದು ಹೇಳಿಕೊಂಡು ಶ್ರೀಮಂತರ ಮನೆಗಳಲ್ಲಿ ಕೆಲಸ ಗಿಟ್ಟಿಸಿಕೊಂಡರು. 'ಕೊಳೆಗೇರಿಯ ದುಷ್ಕೃತ್ಯಗಳಿಗೆ ಗೃಹಸ್ಥರ ಮನೆಗಳಲ್ಲಿ ಪುರಸ್ಕಾರ ಕೊಡಲಾಗುತ್ತಿದೆ' ಎಂದು ಗಣ್ಯರು ಹುಯಿಲೆಬ್ಬಿಸಿದರು. ಆ ಕಾಲದ ದೊಡ್ಡ ನಗರಗಳಲ್ಲಿ ಬೀದಿಪಾಲಾದ ಹಸುಗೂಸುಗಳ ದೃಶ್ಯ ಸಾಮಾನ್ಯವಾಯಿತು. 1870ರಲ್ಲಿ ಲಂಡನ್ ನಗರದ ಹಾದಿ ಬದಿಗಳಲ್ಲಿ 270 ಕ್ಕೂ ಕಮ್ಮಿಯಿಲ್ಲದಷ್ಟು ಸತ್ತ ಹಸುಳೆಗಳ ಎಣಿಕೆಯಾಯಿತು. ಅದೇ ವರ್ಷ 'ಶಿಶು ಜೀವ ರಕ್ಷಕ ಸಮಾಜ'ದ ಸ್ಥಾಪನೆಯಾಯಿತು. ಚರ್ಚಿನ ಧರ್ಮಾಧಿಕಾರಿಗಳು, ಜೊನಾಥನ್ ಸ್ವಿಫ್ಟ್, ಅಡಿಸನ್‌ನಂತಹ ಹೆಸರಾಂತ ಸಾಹಿತಿಗಳು ಧಾತ್ರಿ ಪದ್ಧತಿ ವಿರುದ್ಧ ಪ್ರಚಾರ ಕೈಗೊಂಡರು.

ಈ ವೃತ್ತಿಯ ವಿರುದ್ಧ 19ನೆಯ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡಿನಲ್ಲೂ, 20 ನೆಯ ಶತಮಾನದ ಮೊದಲ ದಶಕದಲ್ಲಿ,-ತಬ್ಬಲಿಗಳ ಆಸ್ಪತ್ರೆ ಹೊರತಾಗಿ-ಯೂರೋಪಿನ ಇತರ ಭಾಗಗಳಲ್ಲೂ ಸಾರ್ವಜನಿಕ ಮತ್ತು ನೈತಿಕ ಒತ್ತಡ ಬಲವಾಗಿ ಬೆಳೆದದ್ದರಿಂದ, ಧಾತ್ರಿ ಸಮಾಜದಿಂದ ನಿರ್ಗಮಿಸಿದಳು ಎಂದು ಇಬ್ರಾಹಿಂ ಬರೆದಿದ್ದಾರೆ. ಉಳ್ಳವರ ಮಕ್ಕಳ ಪಾಲನೆ ಚೆನ್ನಾಗಿಯೇ ನಿರ್ವಹಿಸಿದ ಧಾತ್ರಿ ಪದ್ಧತಿ ಅದೇ ಸಮಯಕ್ಕೆ ಬಡವರ್ಗದ ಮಕ್ಕಳ ನಿರ್ಲಕ್ಷ್ಯಕ್ಕೆ ಕಾರಣವಾದದ್ದು 'ಕೌತುಕ'ದ ಸಂಗತಿಯಾಗಿದೆ ಎಂದೂ ಅವರು ವ್ಯಾಖ್ಯಾನಿಸಿದ್ದಾರೆ. ಹೀಗಾಗಿ ಕೆಳವರ್ಗದ ಮಕ್ಕಳು ಕೇವಲ ಎಪ್ಪತ್ತಕ್ಕೆ ಒಂದರಂತೆ ಪ್ರಾಯ ತಲುಪಿ, 'ಕೊನೆಗೂ ಭಿಕ್ಷೆಯೆತ್ತುವುದಕ್ಕೋ, ಕಳ್ಳತನ ಮಾಡಲಿಕ್ಕೋ ಅಥವಾ ವೇಶ್ಯೆಯಾಗುವುದಕ್ಕೋ ಉಳಿದುಕೊಂಡರು" ಎಂಬ ಜೋನಾಸ್ ಹ್ಯಾನ್‌ವೆ (1757) ಉದ್ಧರಿಸಿದ್ದಾರೆ.

ಧಾತ್ರಿಯು ಚರಿತ್ರೆಯ ರಂಗಭೂಮಿಯಿಂದ ಕಣ್ಮರೆಯಾದುದಕ್ಕೆ ಧರ್ಮಾಧಿಕಾರಿಗಳ, ಸಮಾಜ ಸುಧಾರಕರ ನೈತಿಕ ಒತ್ತಡಕ್ಕಿಂತ ಬೇರೆ, ಇನ್ನೂ ಆಳವಾದ ವಾಸ್ತವಿಕ ಕಾರಣಗಳಿದ್ದವು ಎಂದೆನಿಸುತ್ತದೆ. ಪಶ್ಚಿಮ ಯೂರೋಪಿನಲ್ಲಿ ನಡೆದ ಕೈಗಾರಿಕಾಕ್ರಾಂತಿಯೊಡನೆ ಬಂಡವಾಳವು ಕೆಲವೇ ಹಸ್ತಗಳಲ್ಲಿ ಸಂಚಯಿಸುತ್ತಾ, ಹಗಲು-ರಾತ್ರಿ, ಮಕ್ಕಳು-ವಯಸ್ಕರು, ಗಂಡು-ಹೆಣ್ಣುಗಳೆಂಬ ಭೇದವೆಲ್ಲವನ್ನೂ ನಿರ್ಲಜ್ಜೆಯಿಂದ ಧಿಕ್ಕರಿಸುತ್ತ, ಲಕ್ಷಾಂತರ ಕೂಲಿಯಾಳುಗಳ ರಕ್ತವನ್ನು ಹನಿ ಹನಿಯಾಗಿ ಬಿಡದೆ ಹೀರುತ್ತ, ಅದು ತಂತಾನೆ ಓಗ್ಗುತ್ತ ಹೋದ ಕಾಲವಾಗಿತ್ತು. ದಿನಗೆಲಸದ ಅವಧಿಯನ್ನು 16 ರಿಂದ 14,12,10 ತಾಸುಗಳಿಗೆ ಇಳಿಸುವ ಕಾರ್ಖಾನೆ ಕಾಯಿದೆಗಾಗಿ ಕಾರ್ಮಿಕರು ಅನೇಕ ದಶಕಗಳ ಕಾಲ ಹೋರಾಟ ನಡೆಸಬೇಕಾಯಿತು. ಹೆಣ್ಣಾಳುಗಳ ಹಸುಳೆಗಳು ತಾಯಿಹಾಲಿನಿಂದ ವಂಚಿತವಾದವು ಹಾಲೂಡಲು ಸಮಯಾವಕಾಶವಿದ್ದ ಹೆಂಗಸರು ಅದನ್ನು ಪರರ ಮಕ್ಕಳಿಗಾಗಿ ಮಾರಿಕೊಂಡರು. ಮಾನವ ಸಂಬಂಧಗಳು ಹೊಸ ಹೊಸ ಸ್ವರೂಪ ಪಡೆದುಕೊಂಡವು. ಇಂತಹ ಆರ್ಥಿಕ, ಔದ್ಯೋಗಿಕ, ಸಾಂಸ್ಕೃತಿಕ ಸಂಕ್ರಮಣ ಕಾಲದಲ್ಲಿ ಹೊಸ ಮೌಲ್ಯಗಳ ಸಂಕೇತವೆಂಬಂತೆ 'ಹಾಲೂಡುವ ಸೀಸೆ' ಅನಿವಾರ್ಯವಾಗಿ ಜನ್ಮವೆತ್ತಿತು. 19ನೆಯ ಶತಮಾನದ ಪೂರ್ವಾರ್ಧದಲ್ಲಿ ಗುಡ್ ಇಯರ್ ಕಂಪನಿ ರಬ್ಬರನ್ನು ಸಂಸ್ಕರಿಸಿ ಚೊಚುಕ ಮಾಡುವ ವಿಧಾನ ಕಂಡು ಹಿಡಿದಿತ್ತು. ಅಂತೂ ಧಾತ್ರಿ ಪದ್ಧತಿಗೆ ಒಂದು ತೆರೆ ಬಿದ್ದಿತು.

ಗೂಡಿರುವ' ಅಥವ ಬಂಡೆಯಂಥ ಬೆನ್ನಿರುವ, ಬುದ್ಧಿ ಮಾಂದ್ಯವಿರುವ, ಕುರುಡು, ಕಿವುಡು, ಅಥವ ಅಪಸ್ಮಾರ ದಿಂದ ನರಳುವ......ದಾದಿಯನ್ನು ದೂರವಿಡು...... ದಾದಿಯ ಚಾರಿತ್ರ್ಯ ಮತ್ತು ರಕ್ತದಿಂದ ಅವಳ ಹಾಲು ಮಾರ್ಪಾಡಾಗುತ್ತದೆ. ದಾದಿಯ ಹಾಲು ಒಳಿತೋ ಕೆಡಕೋ ಎನ್ನುವುದು ಆಕೆಯ ಚಾರಿತ್ರ್ಯ ಮತ್ತು ರಕ್ತವನ್ನವಲಂಬಿಸಿದೆ."

ದಾದಿಯ ಹಾಲಿನ ವಿಕ್ರಯ

ಯೂರೋಪಿನಲ್ಲಿ ನಡೆದ ಕೈಗಾರಿಕಾಕ್ರಾಂತಿಯ ಪರಿಣಾಮವಾಗಿ ಗ್ರಾಮಂತರ ಪ್ರದೇಶ ಅವಿಭಕ್ತ ಕುಟುಂಬಗಳು ಒಡೆದು ಹೋದವು. ಹಳ್ಳಿಯ ಜನ ಕೈಗಾರಿಕಾ ಕೇಂದ್ರಗಳತ್ತವಲಸೆ ಹೋಗಲಾರಂಭಿಸಿದರು. ಅತಿ ಜನಸಂದಣಿಯ ದೊಡ್ಡನಗರಗಳು ತಲೆಯೆತ್ತಿದವು. ಅನಿಶ್ಚಿತ ಹಣಕಾಸು ವಿನಿಮಯದ ಆರ್ಥಿಕ ನೆಲೆಯ ಮೇಲೆ ಪ್ರತ್ಯೇಕ, ಪುಟ್ಟ ಸಂಸಾರಗಳು ನಿಲ್ಲ ಬೇಕಾಯಿತು. 18ನೆಯ ಶತಮಾನದ ಯೂರೋಪಿನಲ್ಲಿ ಧಾತ್ರಿಯರಿಗಾಗಿ ಬೇಡಿಕೆ ಇಮ್ಮಡಿ ಮುಮ್ಮಡಿಯಾಗಿ ಬೆಳೆಯಿತು. 1715ರಲ್ಲಿ ಪ್ಯಾರಿಸ್ ನಗರವೊಂದರಲ್ಲೇ ಇವರನ್ನು ನೇಮಿಸಿಕೊಳ್ಳಲು ನಾಲ್ಕು ನೋಂದಣಿ ಕೇಂದ್ರಗಳು ತೆರೆಯಲ್ಪಟ್ಟವು. ಅಲ್ಲಿ ಧಾತ್ರಿಯರು ತಮ್ಮ ಹೆಸರು, ವಯಸ್ಸು, ಸಂತಾನದ ಬಗ್ಗೆ ವಿವರಗಳನ್ನು ಕೊಡಬೇಕಿತ್ತು. ಧಾತ್ರಿಯ ಸ್ವಂತ ಮಕ್ಕಳ ಹಿತರಕ್ಷಣೆಗಾಗಿ 1762ರಲ್ಲಿ ಜಾರಿ ಮಾಡಿದ ಒಂದು ಕಾಯಿದೆ, ಒಬ್ಬ ಹೆಂಗಸು ತನ್ನ ಮಗುವಿಗೆ 9 ತಿಂಗಳು ತುಂಬುವವರೆಗೆ ಇನ್ನೊಂದು ಮಗುವಿಗೆ ಧಾತ್ರಿಯಾಗಕೂಡದೆಂದು ಆದೇಶಿಸಿತು, ಮತ್ತು ಧಾತ್ರಿಯರು ಆಗಿಂದಾಗ್ಗೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಕಟ್ಟು ಮಾಡಿತು.

ಹೀಗಾಗಿವೈದ್ಯರೂ ಈವ್ಯವಹಾರದಲ್ಲಿಪಾಲ್ಗೊಳ್ಳುವಂತಾಯಿತು. ಅವರು 'ದಾದಿಯರ ಯಾದಿ'ಮಾಡಿಟ್ಟುಕೊಂಡು, ತಮ್ಮಲ್ಲಿಗೆ ಚಿಕಿತ್ಸೆಗಾಗಿ ಬರುತ್ತಿದ್ದ ಕುಟುಂಬಗಳಿಗೆ ಸಮರ್ಪಕ ಧಾತ್ರಿಯರನ್ನು ಚುನಾಯಿಸುವುದರಲ್ಲಿ ನೆರವಾದರು. ಒಬ್ಬ ಧಾತ್ರಿಯು ಪೂರೈಸಬಹುದಾದ ಹಾಲಿನ ಅಂದಾಜು ಮಾಡಿ, ಅದಕ್ಕೆ ತಕ್ಕ ದರವನ್ನೂ ವೈದ್ಯರೇ ನಿಗದಿ ಮಾಡಬೇಕಾಗಿ ಬಂತು. ಧಾತ್ರಿ ಉತ್ಪಾದಿಸುವ ಹಾಲಿನ ಘನ ಅಳತೆ ಕಂಡುಹಿಡಿಯಲು ಇವರು ಅನೇಕ ವಿಧಾನಗಳನ್ನು ಪರಿಶೀಲಿಸಿದರು. ಕೊನೆಗೆ ಪಿಯರೆ ಬ್ರೂಡಿನ್ ಎಂಬ ಪ್ಯಾರಿಸ್ ವೈದ್ಯ ಹಾಲೂಡುವುದಕ್ಕೆ ಮುಂಚೆ ಮತ್ತು ನಂತರ ಮಗುವಿನ ತೂಕ ಕರಾರುವಕ್ಕಾಗಿ ಅಳೆಯುವುದರ ಮೂಲಕ ಅದಕ್ಕೆ ದೊರಕಿರುವ ಹಾಲಿನ ಘನಮಾನವನ್ನು ಗೊತ್ತು ಮಾಡಬಹುದೆಂದು ತೋರಿಸಿಕೊಟ್ಟನು. 40 ಶಿಶುಗಳಿಗೆ ಹಾಲುಣಿಸಲು 14 ಧಾತ್ರಿಯರನ್ನು ನೇಮಿಸಲಾಗಿದ್ದ ಒಂದು ಗುಂಪಿನ ಅಧ್ಯಯನ ಈತ ನಡೆಸಿ ಒಬ್ಬ ಧಾತ್ರಿ ದಿನವೊಂದಕ್ಕೆ ಸರಾಸರಿ 34 ಔನ್ಸನ್ನು ಕೊಡುತ್ತಾಳೆಂದೂ, ಮತ್ತು ಆಕೆಯ ದೈನಿಕ ಉತ್ಪಾದನೆ 1657 ಗ್ರಾಂನಿಂದ 2230 ಗ್ರಾಂನಷ್ಟು ಇರುತ್ತದೆಂದೂ ಮೊತ್ತ ಮೊದಲಿಗೆ ಸಿದ್ಧ ಮಾಡಿದನು. ಮಾನವ ಹಾಲಿನ ವಾಣಿಜ್ಯೀಕರಣ ಅದರ ವೈಜ್ಞಾನಿಕ ಅಧ್ಯಯನಕ್ಕೆ ಇಂಬು ಕೊಟ್ಟಿತು.

ದಾದಿಯರ ವ್ಯಾಪಕ ಬಳಕೆ ಇನ್ನೂ ಅನೇಕ ಅಪಚಾರಗಳಿಗೆ ಕಾರಣವಾಯಿತು, ದಾದಿಯರು ತಮಗೆ ವಹಿಸಿದ್ದ ಮಕ್ಕಳಿಗೆ ಆಗಿಂದಾಗ್ಗೆ ಮಾಲ್ಟ್ ಮದ್ಯಸಾರ

19 ನೆಯ ಶತಮಾನದ ಇಂಗ್ಲೆಂಡಿನ ಗ್ರಾಮೀಣ ಪ್ರದೇಶದಲ್ಲಿ ಒಂದು ಹೊಸ ರೀತಿಯ ಬೇಸಾಯ ಆರಂಭವಾಯಿತು. ನಗರ ವಾತಾವರಣ ಪ್ರತಿಕೂಲವಾಗಿದೆಯೆಂದೊ ಅಥವಾ ತಮ್ಮ ಸಂಜೆ ಸುತ್ತುಗಳಿಗೆ ಅಡ್ಡಿ ಬರುವುದೆಂದೋ ಪಟ್ಟಣದ ಸಿರಿವಂತ ಸ್ತ್ರೀಯರು ತಮ್ಮ ಹಸುಳೆಗಳನ್ನು ಸಾಕಣೆಗಾಗಿ ಹಳ್ಳಿಯ ರೈತಾಪಿ ಮನೆಗಳಿಗೆ ಅಟ್ಟಿದರು. ಅಲ್ಲಿ ರೂಢಿಗೆ ಬಂದ ಸಾಮೂಹಿಕ ಮೊಲೆಯೂಡಿಕೆ 'ಮಕ್ಕಳ ಬೇಸಾಯ' ಎಂದು ಹೆಸರುವಾಸಿಯಾಯಿತು. ತಮ್ಮ ಭೂಮಿ ಮತ್ತು ಜಾನುವಾರುಗಳ ವ್ಯವಸಾಯದಲ್ಲಿ ನಿರತರಾಗಿದ್ದ ಹಳ್ಳಿ ಹೆಂಗಸರು ಈ ಮಕ್ಕಳನ್ನು ಉಪೇಕ್ಷಿಸಿದರು; ಮಕ್ಕಳ ಮರಣ ಸಂಖ್ಯೆ ಶೇ. 60 ಕ್ಕೆ ಮುಟ್ಟಿತು. 1872 ರಲ್ಲಿ ಇಂಗ್ಲೆಂಡಿನ ಸಂಸತ್ತು ಮಕ್ಕಳ ಪಾಲನೆ ಪೋಷಣೆ ಬಗೆಗಿದ್ದ ಶಾಸನವನ್ನು ಬಿಗಿಗೊಳಿಸಬೇಕಾಯಿತು.

ವಾಗಿದೆ. ಈ ಮೂಲ ಕಲ್ಪನೆಯನ್ನೇ ಆಧಾರ ಮೌಲ್ಯವಾಗಿ ಹೊಂದಿರುವ ಸಮಾಜದಲ್ಲಿ ಮಹಿಳಾ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಚಳುವಳಿಗಳ ಅಗತ್ಯವಿರಲಾರದು. ಆದರೆ ವಾಸ್ತವಿಕವಾಗಿ ನೋಡಿದರೆ, ಹಿಂದಿನಿಂದಲೂ ಜಗತ್ತಿನ ಅನೇಕ ಸಮಾಜಗಳ ರಚನೆಗೆ ಅಸ್ವಾತಂತ್ರ್ಯ ಮತ್ತು ಅಸಮಾನತೆಗಳೇ ಆಧಾರಗಳಾಗಿವೆ. ವರ್ಗ, ಜಾತಿ, ಅಧಿಕಾರ ಶ್ರೇಣಿ ಮೊದಲಾದ ಅನೇಕ ವ್ಯವಸ್ಥೆಗಳಲ್ಲಿ ವೈಯಕ್ತಿಕ ಮಾನವ ಸ್ವಾತಂತ್ರ್ಯ ಮತ್ತು ಅಸಮಾನತೆಯೇ ಹಾಸು ಹೊಕ್ಕಾಗಿರುವ ಈ ಸಮಾಜಗಳಲ್ಲಿ ಸ್ತ್ರೀ ಸ್ವಾತಂತ್ರ್ಯದಷ್ಟೇ ಸಂಪೂರ್ಣ ಪುರುಷ ಸ್ವಾತಂತ್ರ್ಯವೂ ದುರ್ಲಭವಾಗಿದೆ.

ಆದರೆ ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಇತರ ಸಾಮಾಜಿಕ ವಲಯಗಳಲ್ಲಿ ಪುರುಷ ಪ್ರಧಾನವಾಗಿರುವ ಅನೇಕ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಮಾಜಗಳಲ್ಲಿ ಒಟ್ಟಿನ ಅಸ್ವಾತಂತ್ರ್ಯದ ಪರಿಸರದಲ್ಲೂ ಪುರುಷರಿಗೆ ಸ್ತ್ರೀಯರಿಗಿಂತ ತೌಲನಿಕವಾಗಿ ಹೆಚ್ಚಿನ ಸ್ವಾತಂತ್ರ್ಯವಿರುವುದು ಕಂಡು ಬರುತ್ತದೆ. ಈ ಅನಿಷ್ಟ ಪರಿಸ್ಥಿತಿಯ ಸುಧಾರಣೆಗಾಗಿ ಅನೇಕ ಚಳುವಳಿಗಳು ನಡೆದು ಸಂವಿಧಾನ ಮತ್ತು ಕಾನೂನುಗಳ ಮೂಲಕ ಈ ನ್ಯೂನತೆಯನ್ನು ನಿವಾರಿಸುವ ಪ್ರಯತ್ನಗಳು ನಡೆದಿವೆ.

ಈ ಬದಲಾವಣೆಗಳಿಂದ ಮಹಿಳಾ ಸ್ವಾತಂತ್ರ್ಯ, ಸಮಾನತೆಯ ದಿಕ್ಕಿನಲ್ಲಿ ಹೆಚ್ಚಿನ ಪ್ರಗತಿ ಕಂಡು ಬರುತ್ತಿಲ್ಲ. ಹಿಂದಿನಿಂದಲೂ ಮಹಿಳೆಯ ಕಾರ್ಯಕ್ಷೇತ್ರವೆಂದು ಪರಿಗಣಿಸಲಾದ ಮನೆಯ ಕೆಲಸ ಮತ್ತು ಮಕ್ಕಳ ಪಾಲನೆಯನ್ನು ಪುರುಷರು ಮತ್ತು ಇತರ ಸಂಸ್ಥೆಗಳು ಹಂಚಿಕೊಂಡು ಮಹಿಳೆಯನ್ನು ಭಾಗಶಃವಾದರೂ ಮುಕ್ತಳನ್ನಾಗಿ ಮಾಡುವವರೆಗೆ ಹೊರಗಿನ ದುಡಿತ ಮಹಿಳೆಗೆ ವರವಾಗುವುದರ ಬದಲು ಶಾಪವಾದೀತು.

ಈ ಎಲ್ಲ ಅಪೇಕ್ಷಿತ ಬದಲಾವಣೆಗಳು ಒಬ್ಬ ಮಹಿಳೆಯ ಪರಿಸರದಲ್ಲಿರುವ ಇತರ ವ್ಯಕ್ತಿಗಳ ಒಲವು, ವಿಚಾರಗಳನ್ನು ಮಾತ್ರ ಅವಲಂಬಿಸಿದ್ದರೆ ಅದು ಒಬ್ಬಿಬ್ಬರು ಮಹಿಳೆಯರ ಬದುಕಿನಲ್ಲಿ ಸಫಲವಾಗುತ್ತದೆ. ಅದು ಎಲ್ಲ ಮಹಿಳೆಯರಿಗೆ ಅನ್ವಯಿಸಬೇಕಾದರೆ ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯಷ್ಟೇ ಅಲ್ಲ, ಒಟ್ಟಿನ ಮಾನವ ಸ್ವಾತಂತ್ರ್ಯ-ಸಮಾನ ಸಾಮಾಜಿಕ ಸಂಸ್ಥೆಗಳ ಮತ್ತು ಮೌಲ್ಯಗಳ ಭಾಗವಾಗಬೇಕು. ಆಗ ಮಾತ್ರ ಈ ಕಲ್ಪನೆಗಳು ನಮ್ಮ ಬದುಕಿನ ವಾಸ್ತವಿಕ ಸತ್ಯವಾಗವಾಗಬಲ್ಲವು. ಇಲ್ಲದಿದ್ದರೆ, ಅವುಗಳ ಸಫಲತೆ ಈ ಸುಧಾರಣೆಗಳನ್ನು ಮೂಡಿಸಿರುವ ಕಾಗದದ ಮೇಲಷ್ಟೇ ಉಳಿಯುತ್ತದೆ. ಮಹಿಳಾ ಸ್ವಾತಂತ್ರ್ಯ ಸಮಾನತೆಯ ಬಗ್ಗೆ ಕಾಳಜಿಯಿರುವವರೆಲ್ಲರೂ ಈ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಶ್ರಮಿಸಬೇಕಾಗಿದೆ.

ಎಂ. ಎ. ಯದುಗಿರಿ

ಮಹಿಳಾ ಜಾಗೃತಿ

ಸಮಾಜದ ಇತರ ಸದಸ್ಯರಿಗೆ ತೊಂದರೆಯಾಗದಂತೆ ವ್ಯಕ್ತಿಯ ಮಾನಸಿಕ, ಬೌದ್ಧಿಕ ಬೆಳವಣಿಗೆಗೆ ನೆರವಾಗುವ ಸ್ವಾತಂತ್ರ್ಯ, ತಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿ, ಬೆಳಸಿಕೊಳ್ಳಲು ಅವಶ್ಯಕವಾದ ಅವಕಾಶ ಪ್ರತಿ ವ್ಯಕ್ತಿಗೂ ಬೇಕೇಬೇಕು. ಇದಕ್ಕೆ ಹೆಣ್ಣು ಗಂಡೆಂಬ ಭೇದವಿಲ್ಲ. ಈ ಹೇಳಿಕೆ ಸತ್ಯವಾದರೂ ಸ್ತ್ರೀಗೆ ಇಂಥ ಸ್ವಾತಂತ್ರವಾಗಲೀ, ಪುರುಷನಿಗೆ ಸಮಾನವಾದ ಸ್ಥಾನವಾಗಲೀ ಪೂರ್ಣವಾಗಿ ದಕ್ಕಿಲ್ಲ ಎನ್ನುವುದು ಮೇಲುದೃಷ್ಟಿಗೇ ಸ್ಪಷ್ಟವಾಗುತ್ತದೆ. ಇಂದು ಇಡೀ ವಿಶ್ವದ ಮಹಿಳೆ ತನ್ನ ಹಕ್ಕಿಗಾಗಿ ಹೋರಾಡಬೇಕಾದ ಪರಿಸ್ಥಿತಿ ಒದಗಿದೆ.

ಹೋರಾಟ ಅಗತ್ಯ, ನಿಜ. ಆದರೆ ಭಾರತದ ಸಂದರ್ಭದಲ್ಲಿ ಹೋರಾಟದ ಉದ್ದೇಶ ಪ್ರಪಂಚದ ಮಿಕ್ಕದೇಶಗಳಿಗಿಂತ ಭಿನ್ನವಾಗಿರಬೇಕಾಗುತ್ತದೆ. ಕಾರಣ ಕಾನೂನು ಹಾಗೂ ಧಾರ್ಮಿಕ ದೃಷ್ಟಿಯಿಂದ ಈ ದೇಶದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನತೆ ಇದ್ದೇ ಇದೆ. ಸ್ತ್ರೀಯ ಹುಟ್ಟಿನ ಪರಿಕಲ್ಪನೆಯಲ್ಲೇ ಬೇರೆ ದೇಶಗಳಿಗೂ ನಮಗೂ ವ್ಯತ್ಯಾಸವಿದೆ. ಬೇರೆ ಧರ್ಮಗಳಲ್ಲಿ ಸ್ತ್ರೀ ಪುರುಷನ ಒಂದು ಮೂಳೆಯಿಂದ, ಅವನ ಸುಖಕ್ಕಾಗಿ ಸೃಷ್ಟಿಯಾದವಳು (ಉದಾ: ಆದಂ ಈವ್ ಕತೆ). ಆದರೆ ಭಾರತದ ಸೃಷ್ಟಿ ಕಲ್ಪನೆಯಲ್ಲ ಪುರುಷನ ಜೊತೆಯಲ್ಲಿಯೇ ಸ್ತ್ರೀಯ ಸೃಷ್ಟಿಯೂ ಆಗುತ್ತದೆ.

ಮನುಸ್ಮೃತಿಯ 32ನೇ ಶ್ಲೋಕದಲ್ಲಿ ಬ್ರಹ್ಮನು (ಪ್ರಕೃತಿ ಎನ್ನೋಣ) ತನ್ನ ದೇಹವನ್ನು ಎರಡಾಗಿ ವಿಭಾಗಿಸಿ ಸ್ತ್ರೀ ಪುರುಷರನ್ನು ಸೃಷ್ಟಿಸಿದನು ಎಂದು ಅರ್ಥೈಸಲಾಗಿದೆ. ಇದು ಕೇವಲ ಕಲ್ಪನೆಯೇ ಇರಬಹುದು. ಈ ಕಲ್ಪನೆಯಲ್ಲಿ ಸ್ತ್ರೀ ಪುರುಷರ ಸಮಾನತೆ ಘೋಷಿತವಾಗುತ್ತದೆ. ಹೀಗಿರುವುದರಿಂದಲೇ ಉಭಯ ಭಾರತಿಯಂತಹ ವಿದುಷಿಯರೂ, ಆಂಡಾಳ್,

ಮಹಿಳಾ ಸ್ವಾತಂತ್ರ್ಯ, ಸಮಾನತೆ

ವ್ಯವಸ್ಥೆ ಬದಲಾಗಬೇಕು

ಸ್ತ್ರೀ ಸ್ವಾತಂತ್ರ್ಯ ಅಥವಾ ಸ್ತ್ರೀ ಸಮಾನತೆ ಬಗ್ಗೆ ಮಾತನಾಡುವ ಮಂದಿ ಪುರಾಣ ಅಥವಾ ಇತಿಹಾಸ ಪ್ರಸಿದ್ಧ-ಗಾರ್ಗಿ, ಸಿಮೋನ್ ದ ಬೋವ್ವಾರ್ ಮುಂತಾದ ವ್ಯಕ್ತಿಗಳನ್ನು ಉದಾಹರಿಸುವುದು, ಸಂಪ್ರದಾಯವಾಗುವಷ್ಟರ ಮಟ್ಟಿಗೆ ಪರಿಸ್ಥಿತಿ ಇಂದು ಬೆಳೆದು ನಿಂತಿದೆ. ಅದನ್ನು ಅತ್ಯಂತ ಸರಳೀಕರಿಸಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಹೆಣ್ಣು ಗಂಡಿನಂತೇ ಆಗುವುದು ಅಥವಾ ಹೆಣ್ಣು ಕೆಲವಾದರೂ ಕ್ಷೇತ್ರಗಳಲ್ಲಿ ಗಂಡಸರಂತೆ ಸಾಧನೆ ಮಾಡುವುದು ಸ್ತ್ರೀಸ್ವಾತಂತ್ರ್ಯ ಎಂದು ಒಪ್ಪಿಕೊಳ್ಳಲಾಗಿದೆ ಎಂದು ಯಾರಾದರೂ ವಾದಿಸಿದರೆ ಆಶ್ಚರ್ಯ ಪಡುವಂತಿಲ್ಲ.

ಅದಷ್ಟೇ ಅಲ್ಲ. ಬೀದರ್ ಜಿಲ್ಲೆಯ ಗಡಿಭಾಗದ ಹಳ್ಳಿಯೊಂದರಲ್ಲಿ ಮೊನ್ನೆ ತಾನೇ ನಡೆದ ಘಟನೆಯೊಂದನ್ನು ನಿದರ್ಶನವಾಗಿ ತೆಗೆದುಕೊಳ್ಳುವುದರ ಮೂಲಕ ಸಂವಾದ ಆರಂಭಿಸಬಹುದು ಅಂತಹ ಘಟನೆಗಳು ಭಾರತದ ಎಲ್ಲ ಮೂಲೆಗಳಲ್ಲಿ ಸರ್ವೇ ಸಾಮಾನ್ಯ.

ಐದು ವರ್ಷದ ಕೂಸಾಗಿದ್ದಾಗಲೇ ಆಕೆಯ ಮದುವೆ ಆಯಿತು. ಎರಡು ಮಕ್ಕಳೂ ಆದವು. 17 ತುಂಬುವುದರಲ್ಲಿ ಆಕೆಯ ಹೆಣ ಊರ ಬಾವಿಯಲ್ಲಿ ತೇಲಿತು. ಗಂಡನ ಪ್ರಕಾರ ಆಕೆಯೇ ಬಿದ್ದಳು. ಡಾಕ್ಟರು ಹೇಳುವಂತೆ ಹೊಡೆದು ಸಾಯಿಸಿದ ನಂತರ ಬಾವಿಯಲ್ಲಿ ಹಾಕಲಾಗಿದೆ. ತವರುಮನೆಯಿಂದ ದುಡ್ಡು ತರುವಂತೆ ಮಾಡಲು ಅಳಿಯ ತನ್ನ ಮಗಳಿಗೆ ನಾನಾ ತರದ ಚಿತ್ರಹಿಂಸೆಕೊಡುತ್ತಿದ್ದ. ಇದೊಂದು ವರದಕ್ಷಿಣೆ ಸಾವು ಎಂದು ಹುಡುಗಿಯ ತಂದೆ ದೂರು ನೀಡಿದ್ದಾನೆ. ಕೇಸು ನಿಲ್ಲಲು ಕೆಲವು ಸಾಕ್ಷಿಗಳು ಬೇಕು. ಆದರೆ ಈ ಊರಿನಲ್ಲಿ ಸಾಕ್ಷಿ ಹೇಳಲು ಯಾರೂ ತಯಾರಿಲ್ಲ. ನಿಮ್ಮ ಹೆಣ್ಣುಮಕ್ಕಳಿಗೇ ಹಾಗಾದರೆ' ಎಂಬ ನೈತಿಕ ಬೆದರಿಕೆಯೂ ಅವರನ್ನು ವಿಚಲಿತರನ್ನಾಗಿ ಮಾಡಲಿಲ್ಲ. ಪೋಲೀಸರ ಭಯಕೂಡ ಕಾರಣ ಇರಬಹುದು. ಆದರೆ ನಿಜವಾದ ಕಾರಣ ಬೇರೆಯೇ ಇದೆ.

ಕೊಲೆಯಾದ ಮಗಳ ಮಕ್ಕಳಿಗೆ ಪಾಲು ನೀಡಿದರೆ ಕೇಸು ವಾಪಸ್ಸು ತೆಗೆದುಕೊಳ್ಳುತ್ತೀಯಾ ಎಂದು, ತಮಾಷೆಗೆ, ಆಕೆಯ ತಂದೆಯನ್ನೂ ಕೇಳಲಾಯಿತು, ಆತ ಆಯಿತು ಎಂದು ಬಿಟ್ಟ. ಕೇಳಿದವರು ಎದೆಯೊಡೆದು ಸಾಯುವುದೊಂದು ಬಾಕಿ. ಅದು ಸರಿಯೆ ಎಂದು ಕೇಳಿದ್ದಕ್ಕೆ ಆತ ನೀಡಿದ ಉತ್ತರ : ಒಂದು ಹೆಣ್ಣು ತಾನೇ, ಹೋದದ್ದು ಹೋಯಿತು, ಬಿಡಿ. ಇದು ಭಾರತದಲ್ಲಿ ಹೆಣ್ಣಿನ ಸ್ಥಾನಮಾನ ಮತ್ತು ಹೆಣ್ಣಿನ ಬಗೆಗಿನ ಭಾರತೀಯ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ.

ಸಂವಾದ

ಆ ಕಾರಣವೇ ಆ ಊರಿನ ಜನ ಸಾಕ್ಷಿ ಹೇಳಲು ತಯಾರಿರಲಿಲ್ಲ. ಅದೇ ಕಾರಣ, ಕೊಲೆಗಡುಕನಿಗೆ ಮತ್ತೊಂದು ಹೆಣ್ಣು ದೊರೆಯಲು ಕಷ್ಟವಾಗುವುದಿಲ್ಲ. ಕೊಲೆ ಆದ ಹೆಣ್ಣಿನ ತಂಗಿಯನ್ನೇ ಕೊಲೆಗಡುಕನಿಗೆ ಮದುವೆ ಮಾಡಿಕೊಟ್ಟಿರುವ ಅನೇಕ ಉದಾಹರಣೆಗಳಿವೆ.

ಅಂತಹ ದೃಷ್ಟಿಕೋನ ಬೆಳೆಯಲು ಕಾರಣವಾದ ವ್ಯವಸ್ಥೆಯನ್ನು, ಹೆಣ್ಣು ಮನುಷ್ಯಳು ಎಂದು ಒಪ್ಪಿಕೊಳ್ಳಲು ತಯಾರಿಲ್ಲದ ಮನಸ್ಸನ್ನು ಬದಲಾಯಿಸುವುದೇ ಸ್ತ್ರೀ ಸ್ವಾತಂತ್ರ್ಯ ಅಥವಾ ಸ್ತ್ರೀ ಸಮಾನತೆ. ಆ ರೀತಿಯಾದಾಗ, ಸಾಧನೆ ಮಾಡಿದ ಬೆರಳೆಣಿಕೆಯ ಮಹಿಳೆಯರ ಸಂಖ್ಯೆ ಸಾವಿರ ಸಾವಿರ ಆಗುತ್ತದೆ.

ಆ ಕನಸನ್ನು ಕಳೆದುಕೊಂಡ ಕಾರಣ, ಪಶ್ಚಿಮ ಜಗತ್ತಿನ ಸ್ತ್ರೀ ವಿಮೋಚನ ಚಳವಳಿ ಟಕ್ಕು ತಪ್ಪಿತು. ಮತ್ತು ಹೆಣ್ಣಿನಂತೆ ಹೀನಾಯ ಸ್ಥಿತಿಯಲ್ಲಿ ಕೆಳ ಜಾತಿ ಹಾಗೂ ಕೆಳವರ್ಗದ ಗಂಡಸು ಬದುಕುತ್ತಿದ್ದಾನೆ. ಎಂಬುವುದನ್ನು ಭಾರತದ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಕನಸುವ ಜನ ಎಂದೂ ಮರೆಯಕೂಡದು.

ಸುಚೇತನ ಸ್ವರೂಪ

ಮಾನವ ಸ್ವಾತಂತ್ರ್ಯ

ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯ ಕಲ್ಪನೆಗಳು ಮೂಲಭೂತವಾದ ಮಾನವ ಸ್ವಾತಂತ್ರ್ಯ ಮತ್ತು ಸಮಾನತೆಯ ಕಲ್ಪನೆಯ ಒಂದು ವಿಶೇಷ ಅಂಗ

ಗಾರ್ಕಿಯ ಕತೆ

ಸ್ನೇಹಮಯಿ

ನಾವು ಇಪ್ಪತ್ತಾರು ಮಂದಿ ಇದ್ದೆವು. ಕಪ್ಪು ಕಂದರದಂಥಾ ನೆಲಮನೆಯಲ್ಲಿ ಮುಂಜಾವಿನಿಂದ, ರಾತ್ರಿಯವರೆಗೆ ಹಿಟ್ಟು ನಾದುತ್ತಾ 'ಪ್ರೆಸಲ್' ಮಾಡುತ್ತಾ ಉಳಿದ. ಇಪ್ಪತ್ತಾರು ಜೀವಂತ ಯಂತ್ರಗಳು ನಾವು. ನಮ್ಮ ನೆಲಮನೆಯ ಕಿಟಕಿಗಳು, ಹೊರಗೆ ಪಾಚಿಗಟ್ಟಿ ಹಸಿರಾದ ಇಟ್ಟಿಗೆಗಳನ್ನು ನೋಡುವವು. ಕಿಟಕಿಯ ಹೊರಗಿನ ಸರಳು ತಡೆ. ಸೂರ್ಯನ ಕಿರಣಗಳ ಅಡ್ಡಗಟ್ಟಿ ಹಿಡಿದಿಟ್ಟಿತ್ತು. ಕಿಟಕಿಗಳಿಗೆ ಬೇಲಿ ಬೇರೆ ಕಟ್ಟಿತ್ತು. 'ಪ್ರೆಸಲ್'ಗಳ ಯಾರಿಗಾದರೂ ಕೊಟ್ಟೇವೆಂಬ ಭೀತಿ ನಮ್ಮ ಮಾಲಿಕನಿಗೆ! ಜೇಡರ ಬಲೆ ಜೋತು ಬಿದ್ದ ಮಾಳಿಗೆಗಳಲ್ಲಿ ಬದುಕು ಉಸಿರುಕಟ್ಟುವಂತಿತ್ತು. ಕೊಳೆಯಿಂದ ಕಲೆಗೊಂಡು, ಬೂಷ್ಟು ಹಿಡಿದು ನಾರುವ ದಪ್ಪ ಗೋಡೆಗಳ ನಡುವೆ ಬದುಕು ಕಷ್ಟವಿತ್ತು, ಅಸಹ್ಯವಿತ್ತು, ಅಸ್ವಸ್ಥವಿತ್ತು.

ಬೆಳಗ್ಗೆ ಐದಕ್ಕೇ ನಾವು ಏಳುತ್ತಿದ್ದೆವು. ನಿದ್ದೆ ತೀರದ ಕಣ್ಣುಗಳು ಭಾರವಾಗಿ ತೂಗುವವು. ಆರಕ್ಕೆಲ್ಲ ಮೇಜಿನ ಬಳಿ ಕುಳಿತು 'ಪ್ರೆಸಲ್' ಮಾಡಲು ಪ್ರಾರಂಭಿಸುವೆವು. ಅದರ ಹಿಟ್ಟನ್ನು ನಮ್ಮ ಸಂಗಾತಿಗಳು ರಾತ್ರಿ ಎಲ್ಲ ಎದ್ದಿದ್ದು ನಾದಿಟ್ಟಿರುತ್ತಿದ್ದರು. ಬೆಳಗಿನಿಂದ, ರಾತ್ರಿ ಹತ್ತರವರೆಗೆ ಈ ಉರುಟು ಹಿಟ್ಟಿಗೆ ರೂಪ ಕೊಡುತ್ತಾ, ಮಧ್ಯೆ ಮಧ್ಯೆ ಜೋಮು ಹಿಡಿದ ಕೈ ಕಾಲುಗಳ ನೆಟಿದು ಝಾಡಿಸುತ್ತಾ ಕುಳಿತಿರುತ್ತಿದ್ದೆವು. ದಿನಪೂರ್ತಿ ದೊಡ್ಡ ಬಾಂಡಲಿಯಲ್ಲಿ 'ಪ್ರೆಸಲ್'ಗಾಗಿ ನೀರು ಕುದಿಯುವುದು. ಬೇಕರನ ಗೋರುಸಲಿಕೆ ಅಂಟು ಅಂಟಾದ ಹಿಟ್ಟಿನ ತುಣುಕುಗಳನ್ನು ಬಿಸಿ ಇಟ್ಟಿಗೆಗಳಿಗೆ, ಬಿರುಸಿನಿಂದ ವರ್ಗಾಯಿಸುವುದು. ಬೆಳಗಿನಿಂದ ರಾತ್ರಿಯವರೆಗೆ ಗೂಡು ಒಲೆಯಲ್ಲಿ ಸೌದೆ ಉರಿಯುವುದು. ಮಂಕು ಗೋಡೆಗಳ ಮೇಲೆ, ಕೆಂಪು ಜ್ವಾಲೆಗಳ ಅಣಕ ನೃತ್ಯ! ಬೃಹದಾಕಾರದ ಒಲೆಗೂಡು ನಮ್ಮತ್ತ ಬಿಸಿಹಬೆ ಉಗುಳುತ್ತಾ, ತನ್ನೆರಡು ಗಾಳಿ-ರಂಧ್ರಗಳಿಂದ ನಮ್ಮ ಕೊನೆ ಇಲ್ಲದ ಕಷ್ಟ ಪರಂಪರೆಯ ದಿಟ್ಟಿಸುವುದು. ಆ ಎರಡು ಕುಳಿಗಳು, ಅನುಕಂಪ ಕನಿಕರವೊಂದೂ ಇರದ ರಕ್ಕಸನ ಕಣ್ಣುಗಳಂತೆ ಕೆಕ್ಕರಿಸಿ ದಿಟ್ಟಿಸುವುದು. ಆ ನೋಟದಲ್ಲಿ ತಾತ್ಸಾರ...ಬೇಸತ್ತ ಬೇಸರ! ಈ ಗುಲಾಮರಿಂದ ಹೆಚ್ಚೇನು ಮನುಷ್ಯ ಚರ್ಯಗಳ ನಿರೀಕ್ಷೆ ಇಲ್ಲವೆಂಬ, ತಣ್ಣನೆಯ ತಿರಸ್ಕಾರದ ದೃಷ್ಟಿ ಅದರದು.

ದಿನ, ಪ್ರತಿದಿನ, ನಮ್ಮ ಕಾಲುಗಳಿಗಂಟಿದ ಹಿಟ್ಟಿನ ಧೂಳಿನ ನಡುವೆ, ಕೊಳೆ ಕಲ್ಮಷಗಳ ನಡುವೆ, ಬಿಸಿ ನೆಲಮನೆಯ ಬೆವರು ವಾಸನೆಯಲ್ಲಿ, ಹಿಟ್ಟು ನಾದುತ್ತಾ ಕುಳಿತಾಗ ನಮ್ಮ ಕೆಲಸವನ್ನು ಇನ್ನಿಲ್ಲೆಂಬಂತೆ ದ್ವೇಷಿಸುತ್ತಿದ್ದೆವು... ಅತ್ಯಂತ ತೀವ್ರವಾಗಿ ದ್ವೇಷಿಸಿದೆವು. ಕೆಲಸಕ್ಕೆ ಒಗ್ಗಿ ಹೋದ ಬೆರಳುಗಳ ಚಲನೆಯ ಗಮನಿಸುವ ಅವಶ್ಯಕತೆಯೂ ಇಲ್ಲದಂತೆ, ಯಾಂತ್ರಿಕವಾಗಿ ಕೆಲಸ ನಡೆಯುತ್ತಿತ್ತು. ನಮ್ಮ ಒಬ್ಬೊಬ್ಬರ ಮುಖವೂ

ಸಂಗ್ರಹಾನುವಾದ : **ನೇಮಿಚಂದ್ರ**

ಎಷ್ಟು ಒಗ್ಗಿ ಹೋಗಿತ್ತೆಂದರೆ, ಜೊತೆಗಾರರ ಚಹರೆಯ ಒಂದೊಂದು ಕೊರೆದು ನಿಂತ ಗೆರೆಯೂ ನಮಗೆ ನೆನಪಿತ್ತು. ನಾವು ಮಾತಾಡಲು ಏನೂ ಇರಲಿಲ್ಲ, ನಮ್ಮ ಮೌನಕ್ಕೆ ನಾವು ಒಗ್ಗಿಹೋಗಿದ್ದೆವು. ಅರ್ಧ ಸತ್ತಂತಿದ್ದೆವು. ಕಲ್ಲುಗೊಂಬೆಗಳಂತೆ ಭಾವನಾಶೂನ್ಯರಾಗಿದ್ದೆವು. ನಮ್ಮ ಇಂದ್ರಿಯಗಳೆಲ್ಲ ಬೆಂದು ಬರಡಾಗಿದ್ದವು. ನಮ್ಮ ಆಡಿರದ ಮಾತುಗಳಲ್ಲಿ ಮೌನ ಸಹಜವಿತ್ತು, ಸಹನೀಯವಿತ್ತು, ಸಂಭವವಿತ್ತು.

ಕೆಲವೊಮ್ಮೆ ನಾವು ಹಾಡುತ್ತಿದ್ದೆವು. ಇದ್ದಕ್ಕಿದ್ದಂತೆ ಯಾರಾದರೂ ಬೇಸತ್ತು, ನಿಡಿದಾದ ನಿಟ್ಟುಸಿರು ಬಿಡುವ. ಮೆಲುವಾಗಿ, ಶೋಕತಪ್ತ ಇಂಪು ದನಿಯಲ್ಲಿ ಸುಮಧುರವಾಗಿ ಹಾಡುವ. ಎದೆಯ ಭಾರವಷ್ಟೋ ಹಗುರಾಗುವುದು. ಉಳಿದವರು ನೀರವತೆಯ ನಡುವಿನ ಆ ಒಂಟಿದನಿಯ ಆಪ್ಯಾಯಮಾನವಾಗಿ ಕೇಳುವರು. ನೆಲಮನೆಯ ನಡುವೆ ಆ ಒಂಟಿದನಿ ಕ್ಷಣ ತೂಗಾಡಿ, ಮೆಲ್ಲನೆ ಏರಿಳಿದು ಮುಸುಕಾಗಿ ಮರೆಯಾಗುವುದು. ಇದ್ದಕ್ಕಿದ್ದಂತೆ ಹಲವು ಕಂಠಗಳು ಜೊತೆಗೂಡಿ, ಹಾಡು ಏರು

ಅಕ್ಕಮಹಾದೇವಿ. ಮೀರಾಬಾಯಿಯವರಂತಹ ಆಧ್ಯಾತ್ಮ ಸಿದ್ಧಿಯನ್ನು ಪಡೆದವರು, ರಣರಂಗ, ರಾಜಕಾರ್ಯಗಳೆರಡರಲ್ಲೂ ಮಿಂಚಿದ ಧೀರೆಯರು ಹೆಚ್ಚೇಕೆ ಪ್ರತಿ ರಂಗದಲ್ಲೂ ಉನ್ನತ ಮಟ್ಟವನ್ನು ಮುಟ್ಟಿದ ಸ್ತ್ರೀಯರು ಕೇವಲ ಭಾರತದಲ್ಲಿ ಮಾತ್ರ ದೊರೆಯುತ್ತಾರೆ. ಈ 20ನೇಯ ಶತಮಾನದಲ್ಲಿಯೂ ಅಮೇರಿಕ, ರಷ್ಯಗಳಂತಹ ಅತಿ ಮುಂದುವರೆದ ರಾಷ್ಟ್ರಗಳಲ್ಲೂ ಒಬ್ಬ ಮಹಿಳೆಯೂ ರಾಷ್ಟ್ರಾಧ್ಯಕ್ಷೆಯಾಗಲೀ, ಮಂತ್ರಿಯಾಗಲೀ ರಾಯಭಾರಿಯಾಗಲಿ ಇಲ್ಲ ಎನ್ನುವುದನ್ನು ಗಮನಿಸಬೇಕು.

ಹಾಗಾದರೆ ಭಾರತೀಯ ಸ್ತ್ರೀಯ ಸ್ಥಿತಿ ತುಂಬಾ ಉತ್ತಮವಾಗಿದೆಯೇ ಎಂದರೆ ಇಲ್ಲವೆಂಬುದೇ ಉತ್ತರ ಅನೇಕ, ಆಂತರಿಕ, ಬಾಹ್ಯ ಕಾರಣಗಳಿಂದಾಗಿ ಸಾಮಾಜಿಕ ಬಂಧನ ಅವಳನ್ನು ಬಿಗಿದಿದೆ. ಅವಿದ್ಯೆ, ಸಂಪ್ರದಾಯ ಪ್ರಿಯತೆ, ಮೂಢ ನಂಬಿಕೆಯ ಸೆರೆಮನೆಯಲ್ಲಿ ಅವಳು ಬಾಧಿತಳಾಗಿದ್ದಾಳೆ. ಅವೇ ಅವಳನ್ನು ಕುಬ್ಜಳನ್ನಾಗಿ ಮಾಡಿವೆ. ಭಾರತ ಸಂವಿಧಾನ ಸ್ತ್ರೀಗೆ ತನಗೆ ಬೇಕಾದವರೊಡನೆ ವಿವಾಹವಾಗುವ (ಅವಿವಾಹಿತೆಯಾಗಿ ಉಳಿಯುವ), ಯಾವ ರಂಗದಲ್ಲಾದರೂ ಶಿಕ್ಷಣ ಪಡೆಯುವ, ನೌಕರಿ ಪಡೆಯುವ ಅವಕಾಶ ಕಲ್ಪಿಸಿಕೊಟ್ಟಿದೆ. ಆದರೆ ಇಲ್ಲಿನ ಮಹಿಳೆಯ ಸಮಸ್ಯೆ ಎಂದರೆ ಅವಳಿಗೆ ತನಗಿರುವ ಹಕ್ಕು, ಅಧಿಕಾರ ಸಮಾನತೆಯ ಅರಿವೇ ಇಲ್ಲದಿರುವುದು. ಸಮಾಜಕ್ಕೆ ಹೆದರುವ ಅಂದರೆ, ಬೇರೆಯವರು ತನ್ನ ಬಗ್ಗೆ ಏನು ಯೋಚಿಸಿಯಾರು ಎಂಬ ಭೀತಿ, ಆರ್ಥಿಕ ಪರಾವಲಂಬನೆ ಅವಳ ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ. ಇಂದು ಭಾರತೀಯ ಮಹಿಳೆಗೆ ಬೇಕಾಗಿರುವುದು ಜಾಗೃತಿ; ತನ್ನ ಅಧಿಕಾರಗಳ ಬಗ್ಗೆ ತಿಳುವಳಿಕೆ; ಅಕ್ಷರವಿದ್ಯೆಯ ಜತೆಗೇ ವಿಚಾರವಂತಿಕೆಯನ್ನು ಬೆಳೆಸಿಕೊಳ್ಳುವ ಅವಕಾಶ. ಭಾರತದ ಸ್ತ್ರೀಗೆ ತನ್ನನ್ನು ಸುತ್ತುಗಟ್ಟಿರುವ ಸಾಮಾಜಿಕ ಬಂಧನವನ್ನು ಕಿತ್ತೆಸೆಯುವ ಆತ್ಮಬಲ ಬೇಕಾಗಿದೆ. ತನ್ನ ಶಕ್ತಿ ಸಾಮರ್ಥ್ಯಗಳನ್ನು ಕುಟುಂಬಕ್ಕಷ್ಟೇ ಮೀಸಲಾಗಿಡದೆ ಸಮಾಜದ, ದೇಶದ ಉನ್ನತಿಗೆ ವಿನಿಯೋಗಿಸಬಲ್ಲೆನೆಂಬ ವಿಶ್ವಾಸ ಬೇಕಾಗಿದೆ. ಆದ್ದರಿಂದಲೇ ನಾನು ಒತ್ತಿ ಒತ್ತಿ ಹೇಳಲು ಇಷ್ಟ ಪಡುವುದಿಷ್ಟೆ ; ಬೇರೆ ಬೇರೆ ದೇಶಗಳಲ್ಲಿ ಮಹಿಳಾ ಚಳುವಳಿಯ ಉದ್ದೇಶ ಸ್ತ್ರೀ ವಿಮೋಚನೆ, ಭಾರತದಲ್ಲಿ ಈ ಹೋರಾಟದ ಗುರಿ ಮಹಿಳಾ ಜಾಗೃತಿ.

ಎಚ್. ಎಸ್. ಪಾರ್ವತಿ

ಗೃಹಿಣಿಯರು.....

ವ್ಯವಸ್ಥಿತ ಕಾರ್ಯ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವ ಮಹಿಳೆಯರ ಸಂಖ್ಯೆ ಬಹಳ ಕಡಿಮೆ. ಬಹಳಷ್ಟು ಜನ ಸ್ತ್ರೀಯರು ಗೃಹಿಣಿಯರಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರೂ ಅವರ ಕಾರ್ಯಗಳನ್ನು ಉದ್ಯೋಗವೆಂದು ಪರಿಗಣಿಸಿಲ್ಲ. ಇದಕ್ಕೆ ಮುಖ್ಯ ಕಾರಣ ಗೃಹಿಣಿಯ ಕೆಲಸಕ್ಕೆ ವೇತನ ಇಲ್ಲದೇ ಇರುವುದು. ಪುರುಷರು ಸಾಮಾನ್ಯವಾಗಿ ಉದ್ಯೋಗಸ್ಥರೇ ಆಗಿರುವುದರಿಂದ ಈ ರೀತಿಯ ಅಸಮಾನತೆ ಸ್ತ್ರೀಯರಿಗೇ ಮೀಸಲಾದದ್ದು. ಹೀಗಾಗಿ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯದಲ್ಲಿ ಅಸಮಾನತೆಯುಂಟಾಗಿದೆ. ಇದು ಸಾಲದೆಂಬಂತೆ ಗೃಹಿಣಿಯ ಕೆಲಸಕ್ಕೆ ಯಾರೂ ಮಹತ್ವವನ್ನು ಕೊಡುವುದಿಲ್ಲ. ವೇತನವೂ ಇಲ್ಲದೆ, ಗೌರವವೂ ಇಲ್ಲದೆ ಗೃಹಿಣಿಯರಿಗೆ ಅನ್ಯಾಯವಾಗುತ್ತಿದೆ. ಇನ್ನು ಮಹಿಳೆಯ ಸ್ಥಾನಮಾನಗಳನ್ನು ಸಮೂಹ ಮಾಧ್ಯಮಗಳೂ ಸಹ ತಪ್ಪಾಗಿ ಪ್ರತಿಬಿಂಬಿಸುತ್ತಿವೆ. ಮಹಿಳೆಯನ್ನು ಯಾವಾಗಲೂ ಅಬಲೆ, ಲೈಂಗಿಕ ವಸ್ತು, ಹೆಂಡತಿ, ತಾಯಿ ಮುಂತಾದ ಕೆಲವೇ ಪಡಿಯಚ್ಚುಗಳಲ್ಲಿ (Stereo types) ಮಾತ್ರ ಪ್ರತಿಬಿಂಬಿಸುತ್ತಾರೆ. ಮಹಿಳೆಯೂ ಪುರುಷರಷ್ಟು ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಸಾಕಷ್ಟು ಪ್ರಚಾರವಿಲ್ಲ. ಮಹಿಳೆಗೆ ಸಂಬಂಧಪಟ್ಟ ಕಾಯಿದೆಗಳೂ ಸಹ ಕೇವಲ ಕಾಗದದ ಕಾಯಿದೆಗಳಾಗಿವೆ. ಉದಾಹರಣೆಗೆ, ವರದಕ್ಷಿಣೆಯ ವಿರುದ್ಧ ಕಾಯಿದೆ, ಅತ್ಯಾಚಾರ ವಿರುದ್ಧ ಕಾಯಿದೆ, ಸಮಾನ ವೇತನ ಕಾಯಿದೆ, ಇವುಗಳೆಲ್ಲಾ ಜಾರಿಗೆ ಬಂದಿದ್ದರೂ ಪರಿಣಾಮ ಸಾಕಷ್ಟು ಆಗಿಲ್ಲ. ಹೀಗೆ ಆರ್ಥಿಕವಾಗಿಯೂ ಮಾನಸಿಕವಾಗಿಯೂ ಮಹಿಳೆಗೆ ಪುರುಷರಷ್ಟು ಸ್ವಾತಂತ್ರ್ಯವೂ ಇಲ್ಲ, ಸಮಾನತೆಯೂ ಇಲ್ಲವಾಗಿದೆ. ಕುಟುಂಬದಲ್ಲಿಯೂ ಪುರುಷರ ದೃಷ್ಟಿಕೋನ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಗೆ ಉತ್ತೇಜಕವಾಗಿಲ್ಲ. ಇನ್ನು ಸಮಾಜದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆ ಎಲ್ಲಿಂದ ಬರಬೇಕು ? ಗೃಹಿಣಿಯರ ಚಳುವಳಿಯಿಂದ ಮಾತ್ರ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆ ಸಾಧ್ಯ. ಆದರೆ ಗೃಹಿಣಿಯರಲ್ಲಿ ಒಂದು ಸಂಘಟನೆ ಅಥವಾ ಸಂಸ್ಥೆ ಇಲ್ಲದೇ ಇರುವುದರಿಂದ ಈ ಗೃಹಿಣಿಯರು ಎಚ್ಚರಗೊಳ್ಳುವವರೆವಿಗೂ ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆ ನನಸಾಗುವುದಿಲ್ಲ.

ಬಿ. ಆರ್. ಗಾಯತ್ರಿ

ಬಂದವರಲ್ಲ. ಪ್ರಾಂಗಣದಲ್ಲಿ ಕಂಡಾಗ ತಿರಸ್ಕಾರದ ಆಣಕ ನೋಟ, ಅವರದು, ನಾವು ಈ ಬನ್ನು ಮಾಡು ವವರನ್ನು ದ್ವೇಷಿಸುತ್ತಿದ್ದೆವು. ನಮ್ಮ ದ್ವೇಷಕ್ಕೆ ಅಸೂಯೆಯೇ ಮೂಲಕಾರಣವಾಗಿತ್ತು. ಅವರ ಕೆಲಸ ನಮ್ಮದಕ್ಕಿಂತ ಸುಲಭದ್ದು. ಅವರ ಸಂಬಳವೂ ಹೆಚ್ಚು. ಚೆನ್ನಾಗಿ ತಿಂದುಣ್ಣ ಬಲ್ಲವರು. ಶುಭ್ರವಾಗಿ ಆರೋಗ್ಯ ವಾಗಿದ್ದವರು. ಅದರಿಂದಲೇ ಅವರಷ್ಟು ಅಸಹ್ಯವಾಗಿ ಅಸಹನೀಯವಾಗಿ ಕಾಣುತ್ತಿದ್ದರು. ನಾವೋ ಹಳದಿ ತಿರುಗಿದ ಕಂದು ಬಣ್ಣದ ಜನ. ನಮ್ಮಲ್ಲಿ ಮೂವರು ಸಿಫಿಲಿಸ್‌ನಿಂದ ನರಳಿದರೆ, ಮತ್ತುಳಿದವರಿಗೆ ತುರಿಕೆ ರೋಗ. ರಜೆ ದಿನಗಳಲ್ಲಿ ಅವರು ಠಾಕು ಠೀಕಾಗಿ ಉಡುಪು ಧರಿಸಿ ಹೊರಟರೆ, ನಾವು ನಮ್ಮ ಚಿಂದಿಬಟ್ಟೆ ಯಲ್ಲಿ ಹರುಕಲು ಶೂ ಮೆಟ್ಟಿ ನಡೆಯುವವು. ಹೀಗಿದ್ದೂ ನಾವವರನ್ನು ಪ್ರೀತಿಸಲು ಸಾಧ್ಯವಿತ್ತೆ?

ಒಂದು ದಿನ ಅವರ ಮುಖ್ಯಸ್ಥನಾಗಿ ಹೊಸ ಬೇಕರ್ ಬಂದ. ಈ ಹೊಸ ಮನುಷ್ಯ ಮಾಜಿ ಯೋಧ. ಡಮಾಸು ಕೋಟು ಧರಿಸಿ, ಚಿನ್ನದ ಸರಪಳಿಯ ಗಡಿಯಾರ ಹಿಡಿದು ಓಡಾಡುವವ. ನಮಗೋ ಅವನನ್ನು ಕಾಣುವ ಕುತೂಹಲ ಆಗಾಗ್ಗೆ ಇಣುಕು ಹಾಕುವೆವು.

ಆದರ ಅವನೇ ಒಂದು ದಿನ ನಮ್ಮ ಕಾರ್ಯಾ ಗಾರಕ್ಕೆ ಬಂದಿಳಿದ. ಬಾಗಿಲನ್ನು ಒದ್ದು ತೆಗೆದು, ನಗುತ್ತಾ ನಿಂತವನು– "ಹಲೋ, ಹೇಗಿದ್ದೀರಿ" ಕೇಳಿದ. ಬುರುಗೆದ್ದ ತಳಮನೆಯ ಹೊಗೆ ಅವನ ಕಾಲುಗಳ ಸುರುಳಿ ಸುತ್ತಿ ಹೊರಗೆ ಧಾವಿಸಿತು. ಆತ ಅಷ್ಟೆತ್ತರ ದಲ್ಲಿ ನಿಂತು ನಮ್ಮನ್ನೇ ದಿಟ್ಟಿಸಿದ ಅವನ ಡಮಾಸಿನ ಕೋಟು ನಿಜಕ್ಕೂ ಸುಂದರವಿತ್ತು. ನೀಲಿ ಬಣ್ಣದ್ದು, ಹೂವುಗಳ ಕಸೂತಿಯುಳ್ಳದ್ದು. ಕೆಂಪು ಹರಳಿನ ಗುಂಡಿ ಗಳು ಹೊಳೆಯುತ್ತಿದ್ದವು. ಅವ ಸುಂದರವಾಗಿ ಎತ್ತರ ವಾಗಿ ಕಟ್ಟುಮಸ್ತಾಗಿದ್ದ. ತಿಳಿಬಣ್ಣದ ಕಣ್ಣುಗಳು. ಅವನ ಅತಿಶುಭ್ರ ಏಪ್ರಾನ್‌ನ ಅಡಿಯಿಂದ ಚೂಪಾದ, ಪಾಲೀಷಿನಿಂದ ಹೊಳೆದ ಅತ್ಯಾಧುನಿಕ ಶೂಗಳು ಇಣುಕುತ್ತಿದ್ದವು. ಆತ ಬಹಳ ಹತ್ತಿರದ ಗೆಳೆಯನಂತೆ ಆತ್ಮೀಯವಾಗಿ ಹರಟಿದ, ಸುಖ ದುಃಖ ವಿಚಾರಿಸಿದ. ಮತ್ತೇನೋ ಇದ್ದಕ್ಕಿದ್ದಂತೆ— "ಇಲ್ಲಿ ಬೇಕಾದಷ್ಟು ಹುಡುಗಿಯರಿದ್ದಾರಲ್ಲವೆ?" ಕೇಳಿದ. ನಮ್ಮಲ್ಲಿ ಕೆಲವರು ಮುಜುಗರದಿಂದ ಹಲ್ಲು ಕಿರಿದರು. ಮುಖ ಮುಖ ನೋಡಿಕೊಂಡರು, ಬಾಯ್ತೆರೆದು ನಕ್ಕರು. ಕೊನೆಗೊಬ್ಬ ವಿನೀತನಾಗಿ "ಅವರಲ್ಲ ನಮಗಲ್ಲ ಬಿಡು" ಎಂದು ಒಪ್ಪಿಕೊಂಡ. ಈ ಯೋಧ ನಮ್ಮನ್ನೆಲ್ಲ ಕಣ್ಣು ಕಿರಿದಾಗಿಸಿ ದಿಟ್ಟಿಸಿದ 'ಹೂಂ ಹೌದು...ನೀವು ಒಬ್ಬರೂ ಆ ಮಟ್ಟಕ್ಕಿಲ್ಲ ಒಬ್ಬರಿಗೂ ಹುಡುಗಿಯರ ಬಲೆಗೆ ಹಾಕಿ ಕೊಳ್ಳಲು ಬೇಕಾದ್ದೇ ಇಲ್ಲ. ಹೆಂಗಸರಿಗೆ ನೋಡಲು ಲಕ್ಷಣವಾಗಿರಬೇಕು. ಕಟ್ಟುಮಸ್ತಾದ ದೇಹ...... ಒಂದಿಷ್ಟು ಬಿಗಿದ ಮಾಂಸಖಂಡ...ಕಲ್ಲಿನಲ್ಲಿ ಕಡೆದಂಥ ಗಟ್ಟಿ ಶರೀರ ಬೇಕು......" ಯೋಧ ಜೇಬಿನಿಂದ ತನ್ನ ಬಲಗೈ ಹೊರಗೆಳೆದು, ಅಂಗಿಯ ತೋಳು ಮಡಚಿ. ಬಿಳಿಯ ಬಲವಾದ ಬಾಹುಗಳ ಮೇಲೆತ್ತಿ ಹಿಡಿದ. "ಇಲ್ಲಿ ನೋಡಿ...ತೊಡೆ, ಎದೆ ಬಿಗಿದಿರಬೇಕು. ಜೊತೆಗೆ ಠಾಕು ಠೀಕಾಗಿ ಉಡುಪು ತೊಡಬೇಕು. ನನ್ನನ್ನೇ ನೋಡಿ–ಹೆಂಗಸರು ಹೇಗೆ ಮುಗಿ ಬೀಳುತ್ತಾರೆ ಗೊತ್ತೆ? ನಾನಂತೂ ಅವರ ಹಿಂದೆ ಬಿದ್ದವನಲ್ಲ, ಕೆಣಕಿ ಕೆರಳಿಸಿ ದವನೂ ಅಲ್ಲ...ಆದರೂ ಡಜನ್‌ಗಟ್ಟಲೆ ಈ ಹೆಂಗಸರು ನನ್ನ ಕುತ್ತಿಗೆಗೆ ಜೋತು ಬೀಳುತ್ತಾರೆ" ಆತ ಬಹಳ ಹೊತ್ತು ಹೆಂಗಸರೊಡನೆಯ ತನ್ನ ದಿಗ್ವಿಜಯಗಳ ಕೊಚ್ಚಿಕೊಂಡ. ಅವರೊಡನೆ ಅವನು ಡ್ಯಾಶಿಂಗ್ ಆಗಿ ವ್ಯವಹರಿಸುವ ಬಗೆಯ ಗರ್ವದಿಂದ ಹೇಳಿಕೊಂಡ. ಆತ ಹೋದ ಎಷ್ಟೋ ಹೊತ್ತಿನವರೆಗೂ ನಾವು ಅವನ ಬಗ್ಗೆಯೇ ಮಾತಾಡುತ್ತಾ ಇದ್ದೆವು. ನಮ್ಮೆಲ್ಲರಿಗೂ ಆತ ಬಹಳ ಹಿಡಿಸಿದ್ದ. ಎಷ್ಟು ಸರಳ ವ್ಯಕ್ತಿ, ಎಂಥಾ ನೇರ ಮಾತು. ಆತನೇ ಭೇಟಿಯಾಗಲು ಬಂದ ರೀತಿ, ಕುಳಿತು ಹರಟೆ ಹೊಡೆದ ಬಗೆ ಎಲ್ಲವೂ ನಮಗೆ ಆತ್ಮೀಯವಾಗಿತ್ತು. ಇಲ್ಲಿಯವರಗೂ ನಮ್ಮನ್ನು ನೋಡಲು ಬಂದವರಾರೂ ಇರಲಿಲ್ಲ. ನಮ್ಮೊಡನೆ ಮಾತಾಡಿದವರಂತೂ ಇಲ್ಲವೇ ಇಲ್ಲ. ನಾವೆಲ್ಲ ಅವನ ಬಗ್ಗೆ, ಅವನಿಲ್ಲಿ ಬೇಕರಿಯ ಹೆಣ್ಣುಗಳೊಡನೆ ನಡೆಸಬಹು ದಾದ ಚೆಲ್ಲಾಟದ ಬಗ್ಗೆ ಬಹಳ ಹೊತ್ತುಮಾತಾಡಿದವು. ಇದ್ದಕ್ಕಿದ್ದಂತೆ ನಮ್ಮ ಬೇಕರ್ ಆತಂಕದ ದನಿಯಲ್ಲಿ ಹೇಳಿದ– "ಆತ...ಆತ...ಟಾನ್ಯಾಳ ಕಡೆ ಕಣ್ಣು ಹಾಯಿ ಸುವುದಿಲ್ಲ ತಾನೆ........"

ತಟ್ಟನೆ ನಾವೆಲ್ಲ ಸ್ತಬ್ಧರಾದೆವು. ಇಷ್ಟುಹೊತ್ತೂ ಹೇಗೋ ಟಾನ್ಯಾಳನ್ನೇ ನಾವು ಮರೆತು ಬಿಟ್ಟಿದ್ದೆವು

ದನಿಗೇರಿ, ಅಲೆ ಅಲೆಯಾಗಿ ನಮ್ಮ ಜೈಲಿನಂಥ ಗೋಡೆಗಳ ಅಪ್ಪಳಿಸುವುವು. ನಾವು ಹೀಗೇ ಇದ್ದೆವು...... ಇಪ್ಪತ್ತಾರು ಮಂದಿ....! ದೊಡ್ಡ ಕಲ್ಲು ಕಟ್ಟಡದ ನೆಲಮನೆಯಲ್ಲಿ ಬದುಕಿನ ಬವಣೆ, ಭಾರವಿತ್ತು. ಈ ಮೂರು ಅಂತಸ್ತಿನ ಕಲ್ಲು ಕಟ್ಟಡ ನಮ್ಮ ಭುಜಗಳ ಮೇಲಿನ ಭಾರವಂತೆ!

ನಮ್ಮ ಹಾಡುಗಳ ಹೊರತಾಗಿ ನಾವು ಪ್ರೀತಿಸಿದ, ಪೋಷಿಸಿದ ವಿಷಯವೊಂದಿತ್ತು. ನಮ್ಮ ಪಾಲಿಗೆ ರವಿರಶ್ಮಿಯಾಗಿ ಬೆಳಕು ತುಂಬಿದ ವಿಷಯವದು. ನಮ್ಮ ಕಟ್ಟಡದ ಮೊದಲ ಮಹಡಿಯಲ್ಲಿ ಜರಿ ಕಸೂತಿಯ ಕಾರ್ಯಾಗಾರವಿತ್ತು. ಹದಿನಾರು ವರ್ಷದ ಟಾನ್ಯಾ ಅಲ್ಲಿದ್ದ ಮನೆಗೆಲಸದ ಹುಡುಗಿ. ಪ್ರತಿ ಮುಂಜಾನೆ ನೀಲಿ ಕಣ್ಣುಗಳ, ಗುಲಾಬಿ ಚೆಹರೆ ನಮ್ಮ ಕಿಟಕಿಯ ಕಂಬಿಗಳಿಗೆ ಮುಖವೊತ್ತಿ, ಸಿಹಿಯಾದ ದನಿಯಲ್ಲಿ ನಮ್ಮ ಕರೆಯುವುದು—"ಹಲೋ ಜೈಲು ಹಕ್ಕಿಗಳೆ! ನಮಗೆ ಸ್ವಲ್ಪ 'ಪ್ರೆಸಲ್' ಕೊಡಿ" ಆ ತಿಳಿದನಿಯ ಕೇಳುತ್ತಿದ್ದಂತೆಯೇ ನಾವೆಲ್ಲ ಓಡಿ ಬಾಗಿಲು ತೆಗೆಯುವೆವು. ಅವಳಲ್ಲಿ ಚಿಲಿಪಿಲಿ ಮಾತಿನಲ್ಲಿ, ರೂಪು ಲಾವಣ್ಯದ ಖನಿಯಾಗಿ ನಿಂತಿರುವಳು. ಮೇಲು ಹೊದಿಕೆಯ ಹೊರಚಾಚಿ ಹಿಡಿದಾಗ, ನಮ್ಮ ಮುಖ್ಯ ಬೇಕರ್ ಗರಿಗರಿಯಾದ ಚೆನ್ನಾಗಿ ಕಂದು ತಿರುಗಿದ ಬಿಸಿ ಪ್ರೆಸಲ್‌ಗಳ ಅವಳ ಮಡಿಲಿಗೆ ಮಗುಚಿ ಹಾಕುವ. ಅವಳಿಗಾಗಿಯೇ ಕಾದಿಟ್ಟ ವಿಶೇಷ ಪದಗಳಲ್ಲಿ ಮಾತನಾಡಿಸುವೆವು. ಅವಳೊಡನೆ ಮಾತನಾಡುವಾಗ ನಮ್ಮ ದನಿಗಳು ಅತಿ ಮೃದುವಾಗುವವು, ತಮಾಷೆ ಕೀಟಲೆಯಿಂದ ಹಗುರಾಗುವವು.

"ಸಿಕ್ಕಿಬಿದ್ದೀಯ ಜೋಕೆ, ಮಾಲಿಕ ಹಿಡಿದಾನು" ಎಂದು ಎಚ್ಚರಿಸುವಾಗಲೇ, ಆಕೆ ಜೋರಾಗಿ ನಕ್ಕು ಸುಂಡಿಲಿಯಂತೆ ಕ್ಷಣದಲ್ಲಿ ಮಾಯವಾಗಿ ಬಿಡುವಳು.

ಆ ದಿನಕ್ಕೆ ಅದಿಷ್ಟೆ. ಆದರೆ ಅವಳು ಹೋದ ಎಷ್ಟೋ ಹೊತ್ತಿನ ನಂತರವೂ ನಾವು ಅವಳ ಬಗ್ಗೆಯೇ ಮಾತನಾಡುವೆವು. ನಿನ್ನೆ ಹೇಳಿದ ಮಾತುಗಳನ್ನೇ ಇವತ್ತೂ ಹೇಳುವೆವು. ಮೊನ್ನೆ ಹೇಳಿದ್ದೂ ಅವೇ ಆಗಿದ್ದವು. ಕಾರಣ ಅವಳು, ನಾವು ಮತ್ತು ನಮ್ಮ ಸುತ್ತಿನ ಎಲ್ಲವೂ ನಿನ್ನೆ–ಮೊನ್ನೆ–ಅದರಾಚಿನ ದಿನದಂತೆಯೇ ಉಳಿದಿರುತ್ತಿತ್ತು. ನಮ್ಮ ಸುತ್ತು ಏನೊಂದೂ ಬದಲಿರದ ಸ್ಥಿರತೆ, ಜಡತ್ವ ನಮ್ಮ ಅಂತರಾತ್ಮವನ್ನೆ ಕೊಲ್ಲುತ್ತಿತ್ತು. ನಾವು ಹೆಂಗಸರ ಬಗ್ಗೆಯೂ ಮಾತನಾಡುತ್ತಿದ್ದೆವು. ಹೆಂಗಸರ ಬಗ್ಗೆ ಮಾತಾಡುವ ನಮ್ಮ ಒರಟುತನದ ವೈಖರಿ ನಮಗೇ ನಾಚಿಕೆಯಾಗುವಂತಿರುತ್ತಿತ್ತು. ನಮಗೆ ತಿಳಿದಿದ್ದ ಹೆಂಗಸರೂ ಅದಕ್ಕಿಂತ ಹೆಚ್ಚು ಗೌರವಕ್ಕೆ ಪಾತ್ರರಾಗಿಯೂ ಇರಲಿಲ್ಲ. ಆದರೆ ಟಾನ್ಯಾಳ ಬಗ್ಗೆ ನಾವೆಂದೂ ಕೆಟ್ಟದಾಗಿ ಒಂದು ಪದವನ್ನೂ ಉಪಯೋಗಿಸಿದವರಲ್ಲ. ನಮ್ಮಲ್ಲೊಬ್ಬರೂ ಅವಳನ್ನು ಮುಟ್ಟುವ ಧೈರ್ಯ ಮಾಡಿದವರಲ್ಲ. ಅವಳ ಬಗ್ಗೆ ಒಂದು ಸಡಿಲ ಮಾತೂ ಹೊರಬೀದುದಿಲ್ಲ. ಆಕೆ ಎಂದೂ ಹೆಚ್ಚು ಹೊತ್ತು ನಮ್ಮ ನಡುವೆ ಉಳಿದವಳೂ ಅಲ್ಲ. ಆಕಾಶದಿಂದ ಕಳಚಿ ಬಿದ್ದ ತಾರೆಯಂತೆ, ನಮ್ಮೆದುರು ಕ್ಷಣ ಮಿಂಚಿ, ತಟ್ಟನೆ ಮಾಯವಾಗಿ ಬಿಡುವಳು. ಎಲ್ಲ ಮನುಷ್ಯರಂತೆ ನಮಗೂ ಪೂಜಿಸುವ ವಸ್ತುವೊಂದು ಬೇಕಿತ್ತು. ಈ ತಳಮನೆಯಲ್ಲಿ ದುಡಿದ ನಮ್ಮನ್ನು ಟ್ಯಾನ್ಯಾಳ ಹೊರತು ಗಮನಿಸುವವರಾರಿದ್ದರು? ಅದಲ್ಲದೆ, ನಾವು ಆಕೆಯನ್ನು ನಮ್ಮವಳೆಂದು ಎಣಿಸಿದ್ದೆವು. ಅವಳ ಅಸ್ತಿತ್ವ ನಮ್ಮ 'ಪ್ರೆಸಲ್'ಗಳ ಮೇಲೆ ನಿಂತದ್ದೂ ಕಾರಣವಿರಬಹುದು. ಅವಳಿಗೆ ಬಿಸಿಬಿಸಿ ಪ್ರೆಸಲ್‌ಗಳ ಕೊಡುವುದು ನಮ್ಮ ದೈನಂದಿಕ ಕರ್ತವ್ಯವಾಗಿತ್ತು. ನಮ್ಮ ಪೂಜನೀಯ ಮೂರ್ತಿಯೆದುರು ಅದು ನೈವೇದ್ಯವಾಗಿತ್ತು. ಪ್ರೆಸಲ್‌ಗಳ ಜೊತೆಗೆ ಟಾನ್ಯಾಳಿಗೆ ಬಹಳಷ್ಟು ಬುದ್ಧಿವಾದವನ್ನು ಕೊಡುವುದಿತ್ತು. ನಮ್ಮ ಸಲಹೆಗಳ ಬಿರಿದ ಮುಗುಳ್ನಗೆಯಲ್ಲಿ ಕೇಳುವಳು, ನಂತರ ದೊಡ್ಡದಾಗಿ ನಗುವಳು. ಅವುಗಳನ್ನೆಂದೂ ಪಾಲಿಸಿದವಳಲ್ಲ. ಅದರಿಂದ ನಮ್ಮ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದದ್ದೂ ಇಲ್ಲ. ನಮ್ಮ ತವಕ, ಉತ್ಸುಕತೆಯ ಅವಳಲ್ಲಿ ತೋರುವುದರಲ್ಲೇ ನಮ್ಮ ತೃಪ್ತಿ ಇತ್ತು. ಪ್ರತಿಯೊಬ್ಬರಿಗೂ ಪ್ರೀತಿಸಲು ಪೂಜಿಸಲು ಯಾರಾದರೂ ಬೇಕು. ಅದೆಷ್ಟೇ ಅಮುಕಿಟ್ಟರೂ ಪುಟಿವ ಚೆಂಡಿನಂಥಹುದು ಈ ಪ್ರೀತಿ. ನಾವು ಟಾನ್ಯಾಳನ್ನು ಪ್ರೀತಿಸಲೇ ಬೇಕಿತ್ತು. ಅವಳ ಹೊರತು ಪ್ರೀತಿಸಲು ನಮಗೆ ಇದ್ದವರಾದರೂ ಯಾರು?

ನಮ್ಮ ಬೇಕರಿಯ ಪಕ್ಕದಲ್ಲೆ ನಮ್ಮ ಮಾಲಿಕನದೇ ಬನ್ನು ಬ್ರೆಡ್ಡು ಮಾಡುವ ಬೇಕರಿಯೂ ಒಂದಿತ್ತು. ಬನ್ನು ಮಾಡಲಿದ್ದ ನಾಲ್ಕು ಜನರೂ ನಮ್ಮಿಂದ ದೂರವಿರುತ್ತಿದ್ದರು. ಅವರ ಕೆಲಸ ನಮ್ಮದಕ್ಕಿಂತ ಸ್ವಲ್ಪ ಶುಭ್ರವಾಗಿದ್ದ ಕಾರಣ, ತಮ್ಮನ್ನು ನಮಗಿಂತ ಉತ್ತಮರೆಂದು ಭಾವಿಸಿದ್ದರು. ನಮ್ಮ ಕಾರ್ಯಾಗಾರಕ್ಕೆಂದೂ

ಕೋಪದಿಂದ ಗೋರ ಸಲಿಕೆ ಝಳಪಡಿಸಿದ. ಯೋಧ ದಿಗ್ಭ್ರಮೆಗೊಂಡವನು, ಒಮ್ಮೆ ಕ್ರೂರವಾಗಿ ದಿಟ್ಟಿಸಿ "ಸರಿ ಆಯ್ತು ಬಿಡು" ಎಂದು ಹೊರಟ.

ನಾವೆಲ್ಲ ಮೌನವಾಗಿ ಅವರ ನಡುವಿನ ಬಿಸಿ ಚರ್ಚೆ ಆಲಿಸಿದ್ದೆವು. ಟಾನ್ಯಾ ಈಗ ಅಪಾಯದ ಅಂಚಿನಲ್ಲಿದ್ದಳು. ಆದರೂ ನಮ್ಮಲೆಂಥದೋ ಖುಷಿಯ ಕುತೂಹಲ. ಟಾನ್ಯಾ ಈ ಸತ್ವಪರೀಕ್ಷೆಯಲ್ಲಿ ಗೆಲ್ಲುವಳೆ? ನಮ್ಮೆಲರ ಪ್ರಶ್ನೆ ಅದಾಗಿತ್ತು. "ಟಾನ್ಯಾ ಎಂದೂ ಅವನ ಬಲೆಗೆ ಬೀಳುವುದಿಲ್ಲ, ಟಾನ್ಯಾ ಸುಲಭದ ಆಟವಲ್ಲ" ನಮ್ಮೆಲರ ಆತ್ಮವಿಶ್ವಾಸ.

ನಾವೆಲ್ಲ ನಮ್ಮಪೂಜನೀಯ ವಸ್ತುವನ್ನು ಪರೀಕ್ಷೆಗೊಡ್ಡಲು ಉತ್ಸುಕರಾಗಿದ್ದೆವು. ಅಲ್ಲಿಂದ ಮುಂದೆ ನಮ್ಮ ಬದುಕಿಗೆ ಹೊಸ ಆಯಾಮ ದೊರೆಯಿತು. ಒಂದು ಬಗೆಯ ಉದ್ರಿಕ್ತ ಉತ್ಸುಕತೆ, ಕುತೂಹಲ ಆಸಕ್ತಿ ನಮ್ಮ ಬದುಕಿಗೆ ಸೇರ್ಪಡೆಯಾಯಿತು. ಆ ಯೋಧ ಟಾನ್ಯಾಳ ಒಗ್ಗೆ ನೆಟ್ಟ ದೃಷ್ಟಿ ಇಟ್ಟಿದ್ದು ತಿಳಿದ ಮೇಲಂತು ನಮ್ಮ ಸಂಭ್ರಮ ಮುಗಿಲು ಮುಟ್ಟ, ಬದುಕು ರೋಮಾಂಚನಕಾರಿ ಅನುಭವವಾಗಿತು. ಈ ನಡುವೆ ಮಾಲಿಕ ನಮ್ಮಿಂದ ಹೆಚ್ಚು, ಓಟ್ಟು ನಾದಿಸಿದ್ದೂ ತಿಳಿಯುತ್ತಿರಲಿಲ್ಲ.

ಟಾನ್ಯಾ ಎಂದಿನಂತೆ, ಬರುವಳು. ಅದೇ ಮೊದಲಿನ ವಾತ್ಸಲ್ಯದಿಂದ ನಾವು ವ್ಯವಹರಿಸುವೆವು. ನಮ್ಮ ಭಾವನೆಗಳಲ್ಲಿ ಹೊಸ ಭಾವವೊಂದು ನುಸುಳಿತು. ಅದು ಟಾನ್ಯಾಳ ಬಗ್ಗೆ ತೀವ್ರತರದ ಕುತುಹಲದ ಭಾವ.

"ಈ ದಿನ ಅವಳನ್ನು ಸರಿಯಾಗಿ ಗಮನಿಸು" ಬೇಕರ್ ಹೇಳಿದ. ಬಿಡು ಅದೆಲ್ಲ ಕಣ್ಣಿಗೆ ಕಾಣುವಂಥದ್ದಲ್ಲ" ಮತ್ತೊಬ್ಬ ಹೇಳಿದ. ಮತ್ತೆ ಬಿಸಿ ಬಿಸಿ ವಾದ ವಿವಾದ ಆರಂಭವಾಗಿ ದಿನ ಕಳೆದದ್ದೇ ಅರಿವಿರುತ್ತಿರಲಿಲ್ಲ.

ಟಾನ್ಯಾ ಪ್ರತಿ ದಿನವೂ ಅದೇ ಗೆಲುವಿನಲ್ಲಿ ಪುಟಿಯುತ್ತಾ ಬರುವಳು. ಆ ದಿನವೂ ಅವಳದು ಅದೇ ದನಿ "ಹಲೋ ಜೈಲು ಹಕ್ಕಿಗಳೆ....ಇದೋ ನಾ ಬಂದೇ" ನಾವೆಲ್ಲ ಅವಸರದಲ್ಲಿ ಓಡಿ ಬಾಗಿಲು ತೆರೆದೆವು. ಅವಳನ್ನೇ ದೀರ್ಘವಾಗಿ, ಗಾಢವಾಗಿ ದಿಟ್ಟಿಸಿದೆವು. ಮಾತು ಮರೆತಿತ್ತು. ಏನು ಹೇಳುವುದು, ಏನು ಕೇಳುವುದು. ಅವಳು ಅಚ್ಚರಿಯಿಂದ ಕೇಳಿದಳು.

"ಏಯ್ ಏಕೆ ಹೀಗೆ ವಿಚಿತ್ರವಾಗಿದ್ದೀರಿ ?"

"ನಾವಿರಲಿ, ನಿನಗೇನಾಗಿದೆ ಹೇಳು" ಬೇಕರ್ ಮೊನಚಾಗಿ, ಅವಳ ಮುಖಕ್ಕೇ ಕಣ್ಣು ಅಂಟಿಸಿ ಕೇಳಿದ.

"ನನಗೇನಾಗಿದೆ....ಇರಲಿ ಬೇಗ 'ಪುಸೂ' ಕೊಡಿ" ಟಾನ್ಯಾ ಇಷ್ಟು ಅವಸರ ಹಿಂದೆಂದೂ ತೋರಿರಲಿಲ್ಲ.

"ಇರಲಿ ಬಿಡು, ಬೇಕಷ್ಟು ಸಮಯವಿದೆ" ಬೇಕರ್ ಅಲ್ಲಾಡದೆ ಅವಳ ಮುಖವನ್ನೇ ದಿಟ್ಟಿಸಿದ. ಟಾನ್ಯಾ ತಟ್ಟನೆ ತಿರುಗಿ, ಇದ್ದಕ್ಕಿದಂತೆ ಬಾಗಿಲಲ್ಲಿ ಮರೆಯಾದಳು.

ಬೇಕರ್ ಗೋರುಸಲಿಕೆ ತಿರುವುತ್ತಾ, ಶಾಂತವಾಗಿ ಹೇಳಿದ—"ಸರಿ ಬಿಡು ಅವ ಅವಳನ್ನು ಮುಗಿಸಿದ್ದಾನೆ. ಅವನೇ ಗೆದ್ದಾ". ನಾವೆಲ್ಲ ಮೌನವಾಗಿ ಕುರಿ ಮಂದೆಯಂತೆ ಮೇಜಿಗೆ ಹಿಂತಿರುಗಿದೆವು. ಯಾರಿಗೆ ಗೊತ್ತು, ಇರಲಾರದು...." ಸಣ್ಣ ಅನುಮಾನ ನಮ್ಮದು. "ಓಹ್ ಬಾಯಿಮುಚ್ಚು, ಸಾಕಪ್ಪಾಯಿತು "ಬೇಕರ್ ಅರಚಿದ. ಅವನ ಅಸಹನೆಯಲ್ಲಿ ಯೋಧನ ದಿಗ್ವಿಜಯದ ಮನವರಿಕೆಯಿತ್ತು. ನಮ್ಮಲೆಂಥಹುದೋ ನೋವು!

ಹನ್ನೆರಡು ಗಂಟೆಯ ಊಟದ ಸಮಯಕ್ಕೆ ಯೋಧ ಬಂದ. ಮೊದಲಿನಂತೆಯೇ ನೇರ ಮುಖವಿಟ್ಟು ನಕ್ಕ. ನಮಗೊ ಒಳಗೊಳಗೇ ಇರುಸು ಮುರುಸು.

"ಸರಿ ಮಹನೀಯರೆ, ನಾನು ಏನನು ಮಾಡಬಲ್ಲೆ ಎಂದು ತೋರಿಸಲೆ" ಗರ್ವದಿಂದ ಹೇಳಿದ. "ಹೊರಗೆ ಓಣಿಗೆ ಬಂದು, ಬಿರುಕಿನಲ್ಲಿ ಇಣಕಿ ನೋಡಿ, ಸರಿಯಾ ?"

ನಾವೆಲ್ಲ ಒಬ್ಬರ ಮೇಲೊಬ್ಬರು ಮರದ ಗೋಡೆಗಳ ಬಿರಾಕುಗಳಿಗೆ ಒತ್ತಿಟ್ಟ ಅಂಗಳವನ್ನೇ ನೋಡಿದೆವು. ಹೆಚ್ಚು ಹೊತ್ತು ಕಾಯಬೇಕಿರಲಿಲ್ಲ, ಟಾನ್ಯಾ ಅವಸರದ ನಡಗೆಯಲ್ಲಿ ಕೊಚ್ಚೆ ಮಡುಗಳ ಹಾರುತ್ತಾ ಬಂದವಳು ಉಗ್ರಾಣದ ಬಾಗಿಲಲ್ಲಿ ಮರೆಯಾದಳು. ಕೆಲವೇ ಕ್ಷಣದ ನಂತರ ಯೋಧಸಿಳ್ಳೆ ಹಾಕುತಾ ಒಳಗೆ ಹೋದ.

ಮಳೆ ಸುರಿಯುತ್ತಿತ್ತು. ಹನಿ ಹನಿಗಳು ಕೊಚ್ಚೆ ಮಡುವಿನಲ್ಲಿ ಟಪ್ ಟಪ್ಪೆಂದು ತೊಟ್ಟಿಕ್ಕಿ ಸಿಡಿಯುತ್ತಿತ್ತು. ಮಂಕು ಕವಿದ ಚಳಿಯ ದಿನ. ಓಣಿಯ ಚಳಿಯಲ್ಲಿ ನಾವು ಕಾಯ್ದೇ ಕಾಯ್ದೆವು.

ಉಗ್ರಾಣದಿಂದ ಮೊದಲು ಹೊರಬಂದದ್ದು ಯೋಧ. ಅವ ಆರಾಮಾಗಿ ಮೀಸೆ ಹುರಿಮಾಡುತ್ತಾ, ಕೈಗಳೆಡನ್ನು ಜೇಬಿನಲ್ಲಿ ಆಳವಾಗಿ ಇಳಿಬಿಟ್ಟು ಎಂದಿನಂತೆ ನಡೆದ. ಅವನ ಹಿಂದೆಯೇ ಟಾನ್ಯಾ ಹೊರ ಬಂದಳು, ಅವಳ ಕಣ್ಣುಗಳಲ್ಲಿ ಖುಷಿಯ ಹೊಳಪು ಫಳ ಫಳಿಸಿತ್ತು.

(17 ನೇ ಪುಟಕ್ಕೆ)



ಮಹಿಳಾ ಹಕ್ಕುಗಳ ಪ್ರತಿಪಾದನೆ

ಹದಿನೆಂಟನೆಯ ಶತಮಾನದ ಕಡೆಯಲ್ಲಿ ಯೂರೋಪಿನ ಸಾಮಾಜಿಕ ಚಿಂತನೆಯ ಪ್ರವಾಹಕ್ಕೆ ಸೇರ್ಪಡೆಯಾದ ಕೊಡುಗೆಯಲ್ಲಿ ಮೇರಿ ವುಲ್‌ಸ್ಟನ್‌ಕ್ರಾಫ್ಟ್‌ಳ 'ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವಿಮೆನ್' ಒಂದು ಗಮನಾರ್ಹವಾದ ಕೃತಿ.

ಅಂದಿನ ಬುದ್ಧಿಜೀವಿಗಳು ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಕಾಂಕ್ಷೆಗಳ ಬಗ್ಗೆ ಪ್ರತಿಕೂಲ ಧೋರಣೆಯನ್ನು ಬೆಳೆಸಿಕೊಂಡಿದ್ದ ಕಾಲವದು. ಅವರ ಒಟ್ಟು ಸಾಮಾಜಿಕ ಚಿಂತನೆಯಲ್ಲಿ ಹಾಗೂ ಚರಿತ್ರೆಯಲ್ಲಿ ಮಹಿಳೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದರು. ರೂಸೋನ ಮಾತುಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು : "ಎಲ್ಲ ಕಾಲದಲ್ಲೂ ಮಹಿಳೆಯರ ಕರ್ತವ್ಯಗಳೆಂದರೆ ಪುರುಷರಿಗೆ ಉಪಯುಕ್ತವಾಗಿರುವುದು, ಅವರನ್ನು ಸಂತುಷ್ಟಗೊಳಿಸುವುದು, ಪ್ರೀತಿಸುವುದು ಮತ್ತು ಗೌರವಿಸುವುದು, ಚಿಕ್ಕವರಿರುವಾಗ ಪಾಠ ಕಲಿಸುವುದು, ದೊಡ್ಡವರಿರುವಾಗ ಅವರ ಆರೋಗ್ಯಕ್ಕೆ ಗಮನಕೊಟ್ಟು ಬೆಳೆಸುವುದು, ಉಪದೇಶಿಸುವುದು ಮತ್ತು ಸಾಂತ್ವನ ನೀಡುವುದು. ಈ ಎಲ್ಲಾ ಕರ್ತವ್ಯಗಳನ್ನು ಅವರಿಗೆ ಬಾಲ್ಯದಿಂದಲೇ ಕಲಿಸಬೇಕು." ಇಂತಹ ಹಿನ್ನೆಲೆಯಲ್ಲಿ ವುಲ್‌ಸ್ಟನ್‌ಕ್ರಾಫ್ಟ್‌ಳ ಕೃತಿ ಅಪರೂಪದ್ದೆಂದರೆ ಆಶ್ಚರ್ಯವೇನಲ್ಲ. ವಿದ್ಯಾವಂತ ಮಹಿಳೆಯರು ಬೆರಳೆಣಿಕೆಗೆ ಸಿಗುವಷ್ಟು ಅಪರೂಪವಾಗಿದ್ದ ಆ ಕಾಲದಲ್ಲಿ, ತಮ್ಮ ಅಭಿಪ್ರಾಯಗಳನ್ನು ಆಲೋಚನೆಗಳನ್ನು ಕೃತಿಯಲ್ಲಿ ಬರೆದಿಡುವುದಕ್ಕೆ ಅನೇಕ ಅಡೆತಡೆಗಳಿದ್ದವು.

ಆದರೆ ಮೇರಿವುಲ್‌ಸ್ಟನ್‌ಕ್ರಾಫ್ಟ್ ಈ ಎಲ್ಲಾ ಅಭಿಪ್ರಾಯಗಳನ್ನು ಪ್ರಶ್ನಿಸುತ್ತಾಳೆ. ಅವಳ ಪ್ರಕಾರ "ಮಹಿಳೆಯರು ಶೋಷಿತರು. ಈ ಶೋಷಣೆಯ ಪರಿಣಾಮವಾಗಿ ಸ್ತ್ರೀ ಪುರುಷರ ನಡುವೆ ಒಂದು ರೀತಿಯ ಯುದ್ಧದ ವಾತಾವರಣವೇರ್ಪಡುತ್ತದೆ." ಆ ಕಾಲಕ್ಕೆ, ಯಾರೂ ಹೇಳಿರದಂತಹ ಕೆಲವೊಂದು ವಿಚಾರಗಳನ್ನು ಅವಳು ಚರ್ಚಿಸುತ್ತಾಳೆ. ವೇಶ್ಯಾವೃತ್ತಿಯನ್ನು ಕುರಿತು ಅತ್ಯಂತ ಹೃದಯವಂತಿಕೆಯಿಂದ ವಿಚಾರ ಮಾಡುತ್ತಾಳೆ: ಸಮಾಜದಿಂದ ಬಹಿಷ್ಕೃತವಾಗಿರುವ ಈ ಹತಭಾಗ್ಯ ಹೆಣ್ಣುಗಳ ಬಗ್ಗೆ ಪರಿತಪಿಸದಿರಲು ಹೇಗೆ ಸಾಧ್ಯ ? ಯಾವುದೋ ಒಂದು ಚಿಕ್ಕ ತಪ್ಪಿಗಾಗಿ ತಮ್ಮವರ ಪ್ರೀತಿ-ಸಂಬಂಧಗಳಿಂದ ವಂಚಿತರಾಗಿರುವ ಇವರಿಗಾಗಿ ನನ್ನ ಮನಸ್ಸು ಮಿಡಿಯುತ್ತದೆ. ಅವರು ಮಾಡಿರುವುದನ್ನು ಕೆಲವು ವೇಳೆ ತಪ್ಪು ಎಂದು ಹೇಳಲೂ ಸಾಧ್ಯವಿಲ್ಲ. ಅವಳು ಪುರುಷರಿಗೆ ಎಚ್ಚರಿಕೆ ನೀಡುತ್ತಾಳೆ : "ಗಂಡಿನೊಂದಿಗೆ ಹೆಣ್ಣನ್ನು ಸಮಾನವಾಗಿ ಬೆಳೆಸದ ಹೊರತು 'ಮದುವೆ'ಯೆಂಬುದು ಪವಿತ್ರವಾದ ಕಾರ್ಯವೆನಿಸಿಕೊಳ್ಳುವುದೇ ಇಲ್ಲ. ಆಗ ಅವರು ಜೀವನದ ನಿಜವಾದ ಸಂಗಾತಿಗಳಾಗದೆ ಸಹಸತಿಯರಾಗುತ್ತಾರಷ್ಟೆ."

'ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್'
ಲೇಖಕಿ : ಮೇರಿವುಲ್‌ಸ್ಟನ್‌ಕ್ರಾಫ್ಟ್

'ವಿಂಡಿಕೇಷನ್' ಕೃತಿಗೆ ಮುಂಚೆ ಇಂತಹದೊಂದು ಬರವಣಿಗೆಯನ್ನು ಮಹಿಳೆಯೊಬ್ಬಳಿಂದ ಅಂದಿನ ಸಮಾಜ ನಿರೀಕ್ಷಿಸಿಯೇ ಇರಲಿಲ್ಲ. ಶತಮಾನಗಳಿಂದ ಅದುಮಿಟ್ಟಿದ್ದ ಹೆಣ್ಣಿನ ಆಕ್ರೋಶ, ಆಕಾಂಕ್ಷೆಗಳ ಅಭಿವ್ಯಕ್ತಿಯನ್ನು ಈ ಕೃತಿಯಲ್ಲಿ ಕಾಣಬಹುದು. ಒಂದು ಅರ್ಥದಲ್ಲಿ ವ್ಯಾಪಕವಾದ ವಿಷಯವೊಂದರ ಚರ್ಚೆ ಈ ಕೃತಿಯಲ್ಲಿ ಕಂಡು ಬಂದರೂ, ಇನ್ನೊಂದು ಅರ್ಥದಲ್ಲಿ ತೀರ ಸಂಕುಚಿತವಾದ ದೃಷ್ಟಿಕೋನವನ್ನೂ ಕಾಣಬಹುದಾಗಿದೆ. ಇಲ್ಲಿ ವುಲ್‌ಸ್ಟನ್‌ಕ್ರಾಫ್ಟ್ ಚರ್ಚಿಸುವ ಮಹಿಳೆಯರು ಮುಖ್ಯವಾಗಿ ಮೇಲ್ವರ್ಗದ ಮಹಿಳೆಯರೇ ಆಗಿದ್ದಾರೆ. ಹಾಗೆಂದ ಮಾತ್ರಕ್ಕೆ ಅವಳಿಗೆ

ಇದ್ದಕ್ಕಿದ್ದಂತೆ ನಮ್ಮಲ್ಲಿ ಗದ್ದಲದ ವಾದ-ವಿವಾದ ಪ್ರಾರಂಭವಾಯಿತು. ಕೆಲವರು ಟಾನ್ಯಾ ಈ ಯೋಧನ ಬುಟ್ಟಿಗೆ ಬೀಳುವವಳಲ್ಲ ಬಿಡು, ಎಂತು ಆತ್ಮವಿಶ್ವಾಸದಿಂದ ಸಮರ್ಥಿಸಿದರೆ, ಮತ್ತೆ ಕೆಲವರು ಯೋಧನ ಚೆಲುವನ್ನು ನಿಗ್ರಹಿಸಲು ಟಾನ್ಯಾಳಿಗೆ ಸಾಧ್ಯವಿಲ್ಲ ಎಂದು ವಾದಿಸಿದರು. ಉಳಿದವರು 'ಅವನೇನಾದರೂ ನಮ್ಮ ಟಾನ್ಯಾಳ ತಂಟೆಗೆ ಹೋದರೆ, ಮೂಳೆ ಮುರಿಯುತ್ತೇವೆ' ಎಂದು ಘರ್ಜಿಸಿದರು. ಕೊನೆಗೆಲ್ಲ ಸೇರಿ ಯೋಧ ಮತ್ತು ಟಾನ್ಯಾಳ ಮೇಲೆ ಒಂದು ಕಣ್ಣಿಡುವ ನಿರ್ಣಯಕ್ಕೆ ಬಂದೆವು. ನಮ್ಮ ಮುಗ್ಧ ಬಾಲೆಗೆ ಸ್ವಲ್ಪ ಎಚ್ಚರಿಕೆ ಕೊಡುವ ಬಗ್ಗೆಯೂ ಯೋಚಿಸಿದೆವು.

ಒಂದು ತಿಂಗಳು ಕಳೆಯಿತು. ಯೋಧ ಬೇಕರಿಯ ಹಲವು ಹೆಣ್ಣುಗಳೊಡನೆ ಹೊರಗೆಲ್ಲ ಅಡ್ಡಾಡಿದ. ಆಗಾಗ್ಗೆ ನಮ್ಮನ್ನು ನೋಡಲೂ ಬರುತ್ತಿದ್ದ.

ಟಾನ್ಯಾ ಪ್ರತಿದಿನ ಬೆಳಗ್ಗೆ ತನ್ನ 'ಪ್ರಸಲ್'ಗಾಗಿ ಬರುವಳು. ಅದೇ ಗೆಲುವಿನ ಸಿಹಿಯಾದ ಮುಗುಳ್ನಗೆ ಅವಳದು. ನಾವೆಲ್ಲ ಯೋಧನ ವಿಷಯ ಅವಳಲ್ಲಿ ಹೇಳಲು ಪ್ರಯತ್ನಿಸಿದೆವು. ಅವಳು ಅವನನ್ನು 'ಗುಳ್ಳೆ-ಕಣ್ಣನವ' ಎಂದು ಗೇಲಿ ಮಾಡಿದಾಗ ನಮಗೆ ಎಲ್ಲಿಲ್ಲದ ಸಮಾಧಾನ. ನಮಗಿದ್ದಕ್ಕಿದ್ದಂತೆ ನಮ್ಮ ಪುಟ್ಟ ಹುಡುಗಿಯ ಬಗ್ಗೆ ಎಲ್ಲಿಲ್ಲದ ಹೆಮ್ಮೆ. ಯೋಧನ ಬಗ್ಗೆ ಟ್ಯಾನ್ಯಾ ತೋರಿದ ತಾತ್ಸಾರ ನಮಗೆಲ್ಲರಿಗೂ ಅಂಟು ಜಾಡ್ಯವಾಗಿ ನಾವೂ ಅವನನ್ನು ತುಚ್ಛವಾಗಿ ಕಾಣತೊಡಗಿದೆವು.

ಆ ದಿನವೂ ಯೋಧ ನಮ್ಮನ್ನು ನೋಡಲು ಬಂದ. ಸ್ವಲ್ಪ ಹೆಚ್ಚೇ ಕುಡಿದಿದ್ದ. ಹಿಟ್ಟಿನ ಮೂಟೆಯ ಮೇಲೆ ಕುಳಿತು ಜೋರಾಗಿ ನಗ ತೊಡಗಿದ. "ಅಲ್ಲ ಆ ಲಿಡಾ. ಗ್ರೂಷಾ ಇಬ್ಬರೂ ನನಗಾಗಿ ಹೊಡೆದಾಡಿದರು ಗೊತ್ತಾ......ಓಹ್ ದೇವರೆ ಅವರು ಗುದ್ದಾಡಿದ್ದು ನೋಡಬೇಕಿತ್ತು ಮಹರಾಯ......ಅಹ್ಹಾ...ಒಬ್ಬಳ ಜುಟ್ಟು ಇನ್ನೊಬ್ಬಳು ಜಗ್ಗಿ, ನೆಲಕ್ಕುರುಳಿಸಿ ಅವಳ ಮೇಲೇರಿ.......ಓಹೂಹ್ಹೂ......ನನಗಂತೂ ಹೊಟ್ಟೆ ಹುಣ್ಣಾಗುತ್ತಿದೆ" ಕೊನೆ ಇಲ್ಲದಂತೆ ದೊಡ್ಡ ದನಿಯಲ್ಲಿ ನಗತೊಡಗಿದ. ಎಷ್ಟು ಖುಷಿಯಾಗಿ ಕಂಡ. ಏಕೋ ಈ ಬಾರಿ ನಮ್ಮಲ್ಲಿ ಜುಗುಪ್ಸೆ ಹುಟ್ಟಿಸಿದ.

"ಓಹ್ ಈ ಹುಡುಗಿಯರ ವಿಷಯದಲ್ಲಿ ನಾನೆಷ್ಟು ಅದೃಷ್ಟವಂಥ ಅಂತ. ಒಂದು ಕಣ್ಣು ಹೊಡೆದರೆ ಸಾಕು, ನಾ ಮುಂದು ತಾ ಮುಂದು ಎಂದು ಮುಗಿಬೀಳುತ್ತಾರೆ."

ಇದ್ದಕ್ಕಿದ್ದಂತೆ ನಮ್ಮ ಬೇಕರನ ಗೋರು ಸಲಿಕೆ ಕೋಪದಿಂದ ಸದ್ದು ಮಾಡಿತು. ಬೇಕರ್ ವ್ಯಂಗ್ಯವಾಗಿ ಹೇಳಿದ "ಎಳೆ ಗಿಡಗಳ ಬಗ್ಗಿಸೋದೊಂದು ದೊಡ್ಡ ವಿಷಯವಲ್ಲ ಬಿಡು. ನಿಜಕ್ಕೂ ಹೆಮ್ಮರಗಳ ಉರುಳಿಸು, ಆಗ ನೋಡೋಣ." "ಏನಂದೆ, ನನಗಾ ನೀ ಹೇಳಿದ್ದು" ಯೋಧ ಕೆರಳಿ ಕೇಳಿದ. "ಹೂಂ ನಿನಗೇ ಹೇಳಿದ್ದು"

"ಅದೇನು ಹೇಳಬೇಕೋ ಸ್ಪಷ್ಟವಾಗಿ ಹೇಳು. ನೀ ಹೇಳಿದ್ದು ನನಗೆ ತೀರಾ ಅಪಮಾನಕರ. ನನ್ನ ನಿಗ್ರಹಿಸಬಲ್ಲ ಹೆಣ್ಣಾದರೂ ಯಾರಿದ್ದಾರೆ ?" ಪ್ರಾಮಾಣಿಕವಾಗಿಯೇ ಅವ ಕೆಣಕಲ್ಪಟ್ಟಿದ್ದ. ಅವನ ಆತ್ಮಾಭಿಮಾನದ ಮೂಲವೇ ಹೆಂಗಸರನ್ನು ಸೆಳೆವ ಅವನ ಸಾಮರ್ಥ್ಯವಾಗಿತ್ತು. ಅದೊಂದೇ ಅವನಲ್ಲಿ 'ಜಂಬ ಕೊಚ್ಚಲು ಇದ್ದ ವಿಷಯ.

ಕೆಲ ಜನರಿದ್ದಾರೆ, ಅವರಿಗೆ ತಮ್ಮ ದೇಹದ ಅಥವಾ ಆತ್ಮದ ಅಸ್ವಸ್ಥತೆಯೇ ಬದುಕಿನ ಅವಿಭಾಜ್ಯ ಅಂಗವಾಗುತ್ತದೆ. ಆ ವ್ಯಾಧಿಯೊಂದೇ ಅವರ ಬದುಕನ್ನೆಲ್ಲ ಆವರಿಸುತ್ತದೆ. ಅದಕ್ಕಾಗಿಯೇ ಬದುಕುವ ಜನ ಇವರು. ಅದರಿಂದಲೇ ನರಳುತ್ತಾ, ಆ ವ್ಯಾಧಿಯಿಂದಲೇ ಜೀವರಸ ಸೆಳೆದು ಜೀವಿಸುವವರು. ತಮ್ಮ ರೋಗದ ಬಗ್ಗೆ ಜನರಲ್ಲಿ ಗೊಣಗಿಕೊಳ್ಳುತ್ತಾ, ಜನರ ಆಸಕ್ತಿ ಹಿಡಿದಿಡುವವರು. ಅವರ ಅಸ್ತಿತ್ವದ ಪರಮ ಧ್ಯೇಯವೂ ಆ ವ್ಯಾಧಿಯೇ. ಅದಿಲ್ಲದೆ ಖಾಲಿ ಖಾಲಿಯಾಗುವ ಮಂದಿ ಇವರು.

ಇದ್ದಕ್ಕಿದ್ದಂತೆ ಯೋಧ, ಬೇಕರನನ್ನು ಹಿಡಿದು ಕೇಳಿದ.

"ಹೇಳು, ಅದು ಯಾರು ಹೇಳು."

"ಹೇಳ ಬೇಕಾ, ಅದೇ ನಮ್ಮ ಟಾನ್ಯಾ. ನೋಡು, ಅವಳಿಗೆ ನೀನೇನು ಮಾಡಬಲ್ಲೆ ಮಾಡಿ ತೋರಿಸು"

"ಆಂ.......ಇನ್ನೊಂದು ಹೆಮ್ಮರವಾ ? ತಿಂಗಳು ಸಾಕು.......ತಿಂಗಳೇಕೆ, ಎರಡು ವಾರದಲ್ಲಿ ನಿಮಗೆ ತೋರಿಸುತ್ತೇನೆ. ಯಾರೆಂದೆ ಟಾನ್ಯಾ ತಾನೆ ?"

"ಹೊಗು, ತೊಲಗಾಚೆ"ತಟ್ಟನೆ ಬೇಕರ್

ಸ್ಪಂದನ

ಈ ಶೀರ್ಷಿಕೆಯಡಿ ಚಿಕ್ಕ ಚಿಕ್ಕ ಲೇಖನಗಳನ್ನು ಆಹ್ವಾನಿಸುತ್ತೇವೆ. ನಿಮ್ಮ ಸುತ್ತಮುತ್ತಲ ಪರಿಸರದ ಬಗ್ಗೆ ನಿರ್ದಿಷ್ಟ ವಿಷಯವನ್ನು ಕುರಿತಂತೆ ನಿಮ್ಮ ಅನಿಸಿಕೆಗಳನ್ನು ಈ ಶೀರ್ಷಿಕೆಗೆ ಬರೆಯಿರಿ. ಲೇಖನ ಚಿಕ್ಕದಾಗಿ, ಸ್ಪಷ್ಟವಾಗಿ ಇರಲಿ.

ಹಬ್ಬಗಳ ಅರ್ಥ, ಔಚಿತ್ಯ

ಶ್ರಾವಣ ಬಂದಿದೆ. ಹಬ್ಬಗಳು ಸಾಲು ಸಾಲಾಗಿ ಬರುತ್ತಿವೆ. ದಿನದಿನದ ಏನೊಂದೂ ಬದಲಿರದ ಯಾಂತ್ರಿಕ ಬದುಕಲ್ಲಿ ಇದೊಂದು ಹಬ್ಬದ ದಿನ ಏನೋ ನವೀನವೆಂದು ಸ್ವೀಕರಿಸಿ, ಸಂಭ್ರಮಿಸುವುದರಲ್ಲಿ ಆಹ್ಲಾದವಿದೆ. ಹಬ್ಬದ ಸುತ್ತ ಹಮ್ಮಿಕೊಂಡಿರುವ ರಮ್ಯ ಕತೆಗಳ ಮಕ್ಕಳಿಗೆ ಹೇಳುವಲ್ಲಿ ನಮ್ಮ ಸಂಸ್ಕೃತಿಯ ಬೇರುಗಳನ್ನು ಅವರಲ್ಲಿಯೂ ಆಳವಾಗಿ ಇಳಿಸುತ್ತೇವೆ. ಹೊಸ ಹುರುಪು, ಹುಮ್ಮಸ್ಸು ತುಂಬಿ, ಇದೊಂದು ದಿನ ಅಪೂರ್ವವೆಂದು ಖುಷಿ ಪಡುವ ಪ್ರಯತ್ನವೂ ಸ್ವಾಗತಾರ್ಹವೆ. ನೆರೆಹೊರೆಯವರೊಡನೆ ಬೆರೆತು ಆಚರಿಸುವ ಹಬ್ಬಗಳು ಸಾಮಾಜಿಕ ಬದುಕಿನ ಆರೋಗ್ಯಕರ ಬೆಳವಣಿಗೆಗೂ ಸಹಾಯಕಾರಿ. ಆದರೆ ಹಬ್ಬಗಳ ಆಚರಣೆ ಹೇಗಿರಬೇಕು ? ಸಂಭ್ರಮಿಸಿ ಆನಂದಿಸುವ ದಿನಗಳು, ನಮ್ಮಲ್ಲಿ ಕೇವಲ ಕಂದಾಚಾರಗಳ, ಇಲ್ಲದ ಆಡಂಬರಗಳ ಭಾರದಲ್ಲಿ, ಬರೀ ಖರ್ಚಿನ ಬಾಬತ್ತುಗಳಾಗಿ ತಮ್ಮ ಅರ್ಥ ಔಚಿತ್ಯಗಳೆರಡನ್ನೂ ಕಳೆದುಕೊಂಡಿಲ್ಲವೆ ?

ವ್ಯವಸಾಯವೇ ಮೂಲ ಕಸುಬಾಗಿದ್ದ ಕಾಲದಲ್ಲಿ ವರ್ಷವಿಡೀ ದುಡಿದು, ಕುಯ್ಲು ಮುಗಿದಾಗ ಸಮೃದ್ಧಿಯ ಸಂತಸದಲ್ಲಿ, ಬಿಡುವಿನ ಸಮಯವನ್ನು ಸುಗ್ಗಿಯ ಹರ್ಷದಿಂದ ಆಚರಿಸುತ್ತಾ ಬಂದರು. ಇವು ಸಾಮಾಜಿಕ ಬದುಕಿಗೂ, ಬಿಡುವಿನ ಮನೋರಂಜನೆಗೂ ಅಗತ್ಯವಾದವು. ಅವರೊಳಗಿನ ಕಲಾಪ್ರಜ್ಞೆ, ಹಾಡು ಕುಣಿತಗಳಂಥ ಪ್ರತಿಭೆಗಳು ಹೊರಬರುವ ಮಾರ್ಗಗಳಾದವು. ಇಂದು ಹಬ್ಬಗಳು ಬಿಡುವಿನ ಕಾರ್ಯಕ್ರಮಗಳಾಗಿಲ್ಲ.' ಮನೋರಂಜನೆಯ ಅಂಗಗಳೂ ಅಲ್ಲ. ದಿನ ದಿನದ ಯಾಂತ್ರಿಕತೆಯ ತಡೆಗಟ್ಟುವ ಪ್ರಯತ್ನವೂ ಆಗದೆ, ಬರೀ ರೂಢಿಯ ಅನಿವಾರ್ಯ ಆಚರಣೆಗಳಾಗಿವೆ. "ಏಕಪ್ಪಾ ಬಂತು ಈ ಹಬ್ಬ, ಬರೀ ಸಾಲ ...ಆದರೂ ಮಾಡಬೇಕಲ್ಲ" ಎಂದು ಏದುಸಿರು ಬಿಡುತ್ತ ಇಲ್ಲದ ಮೂಢಾಚರಣೆಯಲ್ಲಿ ವೈಚಾರಿಕತೆ ಮರೆತು ಆಚರಿಸುವ ಜನರೇ ಹೆಚ್ಚು.

ಹಬ್ಬಗಳ ಹಿಂದಿನ ಭಾವ ಸುಂದರವಾದದ್ದೆ. ಸ್ನೇಹ ಸೂಚಿಸಲು ಎಳ್ಳು ಬೀರುವ ಸಂಕ್ರಾಂತಿ, ವರ್ಷದ ಆಗಮನದಲ್ಲಿ ಸುಖ-ದುಃಖಗಳ ಸಮನಾಗಿ ಭರಿಸಲು ಬೇವು-ಬೆಲ್ಲದ ಸಂಕೇತ, ಸೋದರ-ಸೋದರಿಯರ ಪ್ರೀತಿ ಸೂಸುವ ನಾಗರಪಂಚಮಿ, ಮನಸ್ಸಿನ ವಿಕಲ್ಪಗಳ ಸುಡುವ ಸಂಕೇತವಾದ 'ಕಾಮನ ಹಬ್ಬ'...ಇವೆಲ್ಲಕ್ಕೂ ಸುಂದರ ಕಲ್ಪನೆಯ ಹಿನ್ನೆಲೆ ಇದೆ. ಆದರೆ ಹಬ್ಬಗಳು ಸ್ನೇಹ ಸೌಹಾರ್ದಸೂಸುವ ಆನಂದದ ದಿನಗಳಾಗಬೇಕೆ ಹೊರತು, ನೂರೆಂಟು ನಿಯಮಗಳ, ಅರ್ಥವಿಲ್ಲದ ಆಚರಣೆಗಳ ಗೊಂದಲವಾಗಬಾರದು. ಮಡಿ-ಮೈಲಿಗೆಯೆಂಬ ವಿಪರೀತದ ಪಿರಿಪಿರಿಯಂತೂ ಹಬ್ಬದ ಖುಷಿಯನ್ನೇ ನಾಶಮಾಡುತ್ತದೆ. 'ನಮ್ಮ ಮನೆಯಲ್ಲಿ ಗಂಡಸರಿಲ್ಲ' ಎಂದೋ, 'ಪೂಜಾವಿಧಿಗಳು ಗೊತ್ತಿಲ್ಲ' ಎಂದೋ, ಎಷ್ಟೇ ಖರ್ಚಾದರೂ ಪುರೋಹಿತರುಗಳ ಕರೆಸಿ, ಅವರು ಕೇಳಿದ್ದೆಲ್ಲ ತರಿಸಿ ಒದ್ದಾಡುವವರೂ ಇದ್ದಾರೆ. ದೇವರನ್ನು ಪುರೋಹಿತರ ಮಂತ್ರಗಳಿಂದಲೇ ಸಂಪರ್ಕಿಸಲು ಸಾಧ್ಯ ಎಂಬುದಂತೂ ಮೂರ್ಖತನದ ಪರಮಾವಧಿ. ಒಂದು ಕಾಲಕ್ಕೆ ಅರ್ಥಪೂರ್ಣವಿದ್ದ ಆಚರಣೆಗಳು, ಕಾಲದ, ಪರಿಸರದ, ಅನಂತ ಪರಿವರ್ತನೆಯಲ್ಲಿ ತಮ್ಮ ಮೂಲ ಅರ್ಥ-ಔಚಿತ್ಯ ಕಳಕೊಂಡ ನಂತರವೂ ಆಚರಣೆಯಲ್ಲಿ ಉಳಿದಿರುವುದು ವಿಷಾದನೀಯ. ಅನಾದಿಕಾಲದಿಂದ ಬಂದದ್ದು ಎಂದು, ನಮ್ಮ ವೈಚಾರಿಕ ಬುದ್ಧಿಗೆ ವಿರೋಧವಾಗಿ, ಅರ್ಥಿಕ ಮುಗ್ಗಟ್ಟಿಗೆ ಪ್ರಶ್ನೆಯಾಗುವಂತೆ, ಕಣ್ಣುಮುಚ್ಚಿ, ಆಚರಿಸುವುದು ಬೇಡ. ತಿಳಿದ ರೀತಿಯಲ್ಲಿ, ಸರಳವಾಗಿ

ಉಳಿದ ವರ್ಗಗಳ ಮಹಿಳೆಯರ ಬಗೆಗೆ ಕಾಳಜಿಯಿಲ್ಲವೆಂತಲ್ಲ. ಆದರೆ ಅವಳ ಚಿಂತನೆ ಮತ್ತು ವಿಶ್ಲೇಷಣೆ ದುಡಿಮೆಯೇ ಆಧಾರವಾದ ಬೃಹತ್ ಮಹಿಳಾ ಸಮುದಾಯವನ್ನು ಕುರಿತಾಗಿಲ್ಲ ಎಂಬುದು ಮುಖ್ಯ. ಈ ಮಿತಿಯಷ್ಟೇ ಅಲ್ಲದೆ, ಅವಳ ಪುಸ್ತಕದಲ್ಲಿ ಈ ಸಮಸ್ಯೆಯನ್ನು ಕುರಿತಂತೆ ಯಾವುದೇ ನಿರ್ದಿಷ್ಟವಾದ ಕಾರ್ಯಕ್ರಮವೂ ಇಲ್ಲ. ಮಹಿಳೆಯರಿಗೆ ಮತದಾನದ ಹಕ್ಕನ್ನಾಗಲಿ, ಶಾಸನಸಭೆಯಲ್ಲಿ ಸ್ಥಾನವನ್ನು ದೊರಕಿಸಿಕೊಳ್ಳುವುದರ ಬಗೆಗಾಗಲೀ, ವೈದ್ಯರು ಮತ್ತು ನ್ಯಾಯಾಧೀಶರೂ ಆಗುವುದರ ಬಗೆಗಾಗಲೀ ಅವಳು ತನ್ನ ವಾದವನ್ನು ಪ್ರತಿಪಾದಿಸುವುದಿಲ್ಲ. ಆದರೂ ಆ ಕಾಲದ ಪತ್ರಿಕೆಗಳು ಮತ್ತು ಕರಪತ್ರಗಳು ಅವಳ ಮೇಲೆ ಸುರಿಸಿದ ದೋಷಾರೋಪ ಕಡಿಮೆಯೇನಲ್ಲ: "ಮೇರಿ ನಿಜವಾಗಿಯೂ ಗಂಡನನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಳ್ಳುವಂತಹವಳು. ಅವಳ ಗಂಡನಂತಹ ಪಾಪದ ಪ್ರಾಣಿಗಳನ್ನು ಅವಳಂತಹ ಹಾದರಗಿತ್ತಿಯಿಂದ ದೇವರೇ ರಕ್ಷಿಸಬೇಕು." ಸಮಾಜ ತೋರಿಸಿದ ಇಂತಹ ಉಗ್ರ ಪ್ರತಿಕ್ರಿಯೆಯನ್ನು ಗಮನಿಸಿದಾಗ ಅವಳ ಕೃತಿಯಿಂದ ವ್ಯವಸ್ಥೆಗೆ ಉಂಟಾದ ಹೊಡೆತದ ಪರಿಣಾಮವನ್ನು ಗಮನಿಸಬೇಕು.

ಮಹಿಳಾ ಶೋಷಣೆಯೆನ್ನುವುದು ಆ ಕಾಲದ ಎಲ್ಲಾ ನಾಗರೀಕ ಸಮಾಜದ ಲಕ್ಷಣವಾಗಿದ್ದಿರಬಹುದು. ಆದರೆ ಅದಕ್ಕೆ ಕಂಡು ಬಂದ ಈ ರೀತಿಯ ಪ್ರತಿಭಟನೆ ನಿಜಕ್ಕೂ ವಿಶೇಷವಾದ ಸಂಗತಿಯೇ ಹೌದು. ಬಂಡವಾಳಶಾಹಿ ಕ್ರಾಂತಿಯಿಂದಾಗಿ ವಾಣಿಜ್ಯೋದ್ಯಮ ವರ್ಗದ ಮಹಿಳೆಯರು ಅಲ್ಲಿ ಇಲ್ಲಿ ಜಾಗೃತರಾಗುತ್ತಿದುದು ಆ ಕಾಲದಲ್ಲಿ ಸಾಮಾನ್ಯವಾಗಿತ್ತು. ಬದಲಾದ ಆರ್ಥಿಕ ವ್ಯವಸ್ಥೆಯಿಂದಾಗಿ ಈ ವರ್ಗಕ್ಕೆ ಸೇರಿದ ಪುರುಷರು ಹೆಚ್ಚು ಹೆಚ್ಚು ಪ್ರಜಾಪ್ರಭುತ್ವವಾದಿಗಳಾಗಿಯೂ, ಮಹಿಳೆಯರು ತಮ್ಮ ತಮ್ಮ ಹಕ್ಕುಗಳ ಬಗ್ಗೆ ಹೆಚ್ಚು ಜಾಗೃತರಾಗುವುದೂ ನಡೆದಿತ್ತು. ನಟಿಯರು, ಕಲಾವಿದರು, ಬರಹಗಾರರು—ಮುಂತಾದ ಸಾಂಸ್ಕೃತಿಕ ರಂಗಗಳ ಮಹಿಳೆಯರು ಶೋಭಿಸಿದರು. ಪ್ರಕಾಶಕರು ಮತ್ತು ನಾಟಕ ಮಂಡಳಿಯ ಒಡೆಯರು ಪುರುಷರಿಂದ ಮಾಡಿಕೊಳ್ಳುತ್ತಿದ್ದಂತೆಯೇ ಸ್ತ್ರೀಯರಿಂದಲೂ ಲಾಭ ಮಾಡಿಕೊಳ್ಳುವ ಯೋಜನೆ ಹೂಡಿದರು.

ಈ ಎಲ್ಲಾ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಮೇರಿ ವುಲ್‌ಸ್ಟನ್‌ಕ್ರಾಫ್ಟಳ ಕೃತಿ ಮತ್ತು ಅವಳ ವಿಚಾರಗಳನ್ನು ಗಮನಿಸಿದಾಗ ಅವಳು ಒಬ್ಬ ಸ್ತ್ರೀತ್ವವಾದಿಯಷ್ಟೇ ಅಲ್ಲದೆ ರ್‍ಯಾಡಿಕಲ್ ಮಾನವತಾವಾದಿಯೂ ಆಗಿದ್ದಳೆಂಬುದನ್ನು ಕಾಣಬಹುದು. ಮಹಿಳೆಯರನ್ನು ಕುರಿತು ವುಲ್‌ಸ್ಟನ್‌ಕ್ರಾಫ್ಟಳು ತೋರಿಸುವ ಕಾಳಜಿ ಮಾನವತಾವಾದವನ್ನು ಕುರಿತದ್ದೂ ಆಗಿದೆಯೆಂಬುದನ್ನು ಯಾರಾದರೂ ಮನಗಾಣಬಹುದು.

●

ಆಶಾ

ಸ್ನೇಹ ಮಯಿ (15 ನೇ ಪುಟದಿಂದ)

ತುಟಿಗಳಲ್ಲಿ ತಿಳಿ ನಗೆ ಕನಸಿನಲ್ಲಿ ನಡೆದಂತೆ ತೇಲುತ್ತಾ, ತೂಗಿ ನಡೆದಳು. ನಮಗಿನ್ನು ಸಹಿಸಲು ಸಾಧ್ಯವಿರಲಿಲ್ಲ. ನಾವೆಲ್ಲ ಬಾಗಿಲಿಗೆ ಹಾರಿ, ಪ್ರಾಂಗಣಕ್ಕೆ ಜಿಗಿದು ಅನಾಗರೀಕವಾಗಿ ದೊಡ್ಡ ದನಿಯಲ್ಲಿ ಶಿಲ್ಲೆ ಹಾಕಿ ಚೀರಿದೆವು. ಅವಳಲ್ಲೇ ಕೊಚ್ಚೆಯ ನಡುವಲ್ಲಿ ತಟಸ್ಥಳಾಗಿ ನಿಂತಳು. ಅವಳ ಸುತ್ತುವರೆದು, ಅತಿ ಅವಾಚ್ಯ ಪದಗಳಲ್ಲಿ ಅವಳ ಶಪಿಸಿದೆವು-ನಾವು ಕ್ರೋಧದ ವಿಷವ ಮೊಗೆ ಮೊಗೆದು ಕಾರಿದೆವು. ಅವಳ ಮುಖ ಕಳೆ ಹಿಂಗಿ ಹೋಯಿತಾ, ಆನಂದದಲ್ಲಿ ತೇಲಿದ್ದ ನೀಲಿಗಣ್ಣುಗಳು ಹಿಗ್ಗಿ ಅಗಲವಾದುವು. ಅವಳ ಉಸಿರು ತಡೆ ತಡೆದು ಹೊರಬಂತು, ಅದರಗಳು ಅದುರುತ್ತಿದ್ದವು.

ಅವಳು ನಮ್ಮೆಲ್ಲರನ್ನು ಲೂಟಿಮಾಡಿದ್ದಳು. ನಮ್ಮೆಲರ ವಿಶೇಷ ಪ್ರೀತಿಯ ಅವಳಲ್ಲಿ ವೆಚ್ಚಮಾಡಿದ್ದೆವು. ಅವಳ ಅಪರಾಧಕ್ಕೆ ತಕ್ಕ ಶಿಕ್ಷೆಯಾವುದೂ ಇರಲಿಲ್ಲ. ಅವಳೊಂದೂ ಪದ ನುಡಿಯಲಿಲ್ಲ. ನಮ್ಮ ನಡುವೆ ಈ ದೇಹ ನಡುಗುತ್ತಾ, ಬೆದರಿ ಬೆಂಗು ಗಣ್ಣಿನಿಂದ ನೋಡುತ್ತಾ, ನಿಂತಿದ್ದಳು. ಜನ ಸೇರತೊಡಗಿದರು. ನಮ್ಮಲೊಬ್ಬ ಅವಳ ರವಿಕೆಯ ತೋಳಾ ಜಗ್ಗಿದ. ತಟ್ಟನೆ ಅವಳ ಕಣ್ಣುಗಳು ಜ್ವಾಲಾಮುಖಿಯಾದವು. ಅವಳು ಕೈ ಎತ್ತಿ ಕೂದಲು ಸರಿಪಡಿಸಿಕೊಂಡು ಅತ್ಯಂತ ಕಟು ದನಿಯಲ್ಲಿ, ಕಂಠ ಎತ್ತರಿಸಿ ಶಾಂತವಾಗಿಯೇ ಹೇಳಿದಳು.

"ಛೀ ದರಿದ್ರ ಜೈಲು ಹಕ್ಕಿಗಳು !" ಈಗ ನೇರವಾಗಿ ನಮ್ಮನ್ನು ನೋಡಿದಳು. ಅವಳ ಹಾದಿಯಲ್ಲಿ ನಾವು ನಿಂತೇ ಇಲ್ಲವೆಂಬಂತೆ ಸುತ್ತು ನಿಂತ ನಮ್ಮ ದಾಟಿ ಹೊರಟವಳು, ಹಿಂತಿರುಗಿಯೂ ನೋಡದೆ ಅದೇ ತಿರಸ್ಕಾರದ ದನಿಯಲ್ಲಿ "ಛೀ ! ಕೊಳಕು ದರಿದ್ರ ಮೃಗಗಳು" ಗಟ್ಟಿಯಾಗಿ ಹೇಳಿ ನಡೆದೇ ಬಿಟ್ಟಳು. ನಾವಲ್ಲಿ ಅಂಗಳದಲ್ಲಿ, ಸೂರ್ಯನಿಲ್ಲದ ಮುಸುಕು ಆಗಸದ ಕೆಳಗೆ, ಕೊಚ್ಚೆ ಮಾಡುವಿನಲ್ಲಿ ನಿಂತೇ ಇದ್ದೆವು.

ನಿರಾಡಂಬರವಾಗಿ, ಸ್ನೇಹ-ಸೌಹಾರ್ದಗಳನ್ನೇ ಮುಖ್ಯ ಉದ್ದೇಶವಾಗಿಸಿ, ಆನಂದಿಸುವ ಪ್ರಯತ್ನ ಮಾಡಬೇಕು.

ಇನ್ನು ಹಬ್ಬಗಳನ್ನು ಪೈಪೋಟಿಯ ದಿನಗಳಾಗಿಸುವವರೂ ಉಂಟು. ಪಕ್ಕದ ಮನೆಯವರು ನೂರು ರೂಪಾಯಿ ಪಟಾಕಿ ಹೊಡೆದರೆಂದು, ಇವರು ಇನ್ನೂರು ರೂಪಾಯಿ ಸುಡುವುದು, ಸೀರೆ ಒಡವೆಗಳಲ್ಲಿ ಪೈಪೋಟಿಗಿಳಿಯುವುದು ಅತ್ಯಂತ ಬಾಲಿಷ ಕ್ರಿಯೆಗಳು. ಕುಂಕುಮಕ್ಕೆ ಕರೆದು, ಎಲೆಅಡಿಕೆ ಜೊತೆ ಸ್ಟೀಲ್ ಪಾತ್ರೆಗಳ ಕೊಟ್ಟು ಶ್ರೀಮಂತಿಕೆ ಪ್ರದರ್ಶಿಸುವವರೂ ಇದ್ದಾರೆ. ಮಾರ್ಕೆಟಿಗರದಿಂದಲೇ ತೆಗೆದುಕೊಂಡವರು ತಮ್ಮ ಮನೆಗೆ ಬಂದಾಗ ಬರೀ 'ಬಾಳೆಹಣ್ಣು' ಕೊಡುವುದು ಹೇಗೆ ಎಂದು ಸಂಕೋಚಿಸುತ್ತಾರೆ. ಸಾಲ ತಂದಾದರೂ ಮಾಡಿ ಮುಗಿಸುತ್ತಾರೆ. ಈ ಬಗೆಯ ಐಶ್ವರ್ಯ ಪ್ರದರ್ಶನ ಬೇಡ. ಹಬ್ಬಗಳಲ್ಲಿ ನಮ್ಮ ಕಲಾವಂತಿಕೆಯು, ಉತ್ತಮ ಅಭಿರುಚಿಯು ತೋರಬೇಕು. ಸ್ನೇಹ-ಸೌಹಾರ್ದದ ಹೊಳಪು ಬೀರಬೇಕು.

ಒಟ್ಟಿನಲ್ಲಿ ಹಬ್ಬಗಳೆಂದರೆ ಹೆದರುವಂತಾಗುವುದು ಬೇಡ. ಸಂತೋಷದ ದಿನಗಳಾಗಿ, ಶ್ರಾವಣ ಬಂದಿದೆ, ಬನ್ನಿ ಆಚರಿಸೋಣ.

—ಚಂದ್ರ

ಮಹಿಳೆ ಪ್ರಯೋಗ ಪಶುವೆ

ಕಳೆದ ತಿಂಗಳು ಆಂಧ್ರ ಪ್ರದೇಶದ ಸ್ತ್ರೀಶಕ್ತಿ ಸಂಘಟನೆ ಎಂಬ ಸಂಘಟನೆಯು, ತಮ್ಮ ಪ್ರದೇಶದಲ್ಲಿರುವ ಮಹಿಳೆಯರನ್ನು ಸಂಘಟಿಸಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಸಂಸ್ಥೆಯು ಮಹಿಳೆಯರಿಗಾಗಿ ತಯಾರಿಸುತ್ತಿರುವ ಜನನ ನಿಯಂತ್ರಣ ಔಷಧಿಯ ಸಂಶೋಧನೆಗೆ ಮಹಿಳೆಯರನ್ನು ಪ್ರಯೋಗ ಜಂತುವಾಗಿಸಿಕೊಳ್ಳುತ್ತಿರುವುದರ ವಿರುದ್ಧ ಸಿಡಿದೆದ್ದಿತು. ಉಚ್ಚ ನ್ಯಾಯಾಲಯಕ್ಕೆ ಮಹಿಳೆಯರಿಗೆ ನ್ಯಾಯ ದೊರಕಿಸಬೇಕೆಂದು ಕೇಳಿ ಅಪೀಲು ಸಲ್ಲಿಸಿತು. ತತ್ಪರಿಣಾಮವಾಗಿ ನ್ಯಾಯಮೂರ್ತಿ ಟಿ. ಎನ್. ಭಗವತಿ, ಎಂ. ಎಂ. ದತ್ತ, ವಿ. ಖಾಲಿದ್ ಮುಂತಾದವರು ಭಾರತ ಸರ್ಕಾರವನ್ನು, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮತ್ತು ಔಷಧ ನಿಯಂತ್ರಣಾಧಿಕಾರಿಗಳನ್ನು ಸಂಶೋಧನೆಗಳ ವಿವರಣೆ ಕೊಡುವಂತೆ ಆದೇಶಿಸಿದೆ.

ಭಾರತ ದೇಶದ ನಾನಾ ಭಾಗಗಳಲ್ಲಿ ಈ ಸಂಶೋಧನೆ ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತಿದೆ. ಇದರ ಪ್ರಯೋಗಗಳು ಗ್ರಾಮೀಣ ಮಹಿಳೆಯರ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಶಿಬಿರಗಳಲ್ಲಿ ನಡೆಯುತ್ತಿದೆ. ಗ್ರಾಮೀಣ ಮಹಿಳೆಯರನ್ನು, ಅದರಲ್ಲೂ ಅನಕ್ಷರಸ್ಥರೂ, ಇಪ್ಪತ್ತರ ಹರೆಯದ ವಿವಾಹಿತ ಬಾಲೆಯರನ್ನು ಜಂತುಗಳಾಗಿ ಬಳಸಲಾಗುತ್ತಿದೆ. ಈ ಸಂಶೋಧನೆಯ ಮುಖ್ಯ ಉದ್ದೇಶವೇನೆಂದರೆ ಚುಚ್ಚುಮದ್ದಿನ ಮೂಲಕ (Net oen) ಜನನ ನಿರೋಧಕ ಔಷಧವನ್ನು ಮಹಿಳೆಯರಿಗೆ ವರ್ಗಾಯಿಸುವುದು. ಪ್ರತಿ ಹಂತದಲ್ಲಿಯೂ ನಡೆಯುವ ಸಂಶೋಧನೆಗಳ ಪರಿಣಾಮವನ್ನು ಪ್ರಕಟಿಸುವ ಮೊದಲೇ ಭಾರತದ ಬೇರೆ ಬೇರೆ ಭಾಗಗಳಲ್ಲಿ, ಬೇರೆ ಬೇರೆ ಶಿಬಿರಗಳಲ್ಲಿ ಈ ಔಷಧಗಳನ್ನು ಬಳಸಲಾಯಿತು.

ಈ ಔಷಧವನ್ನು ಉಪಯೋಗಿಸಿದ ಸುಮಾರು ೧೦-೨೦ ದೇಶಗಳು ಮಹಿಳೆಯರಿಗಾಗುವ ತೊಂದರೆಗಳನ್ನು ಗುರ್ತಿಸಿ, ಮಹಿಳೆಯರ ಮೇಲೆ ಉಂಟುಮಾಡುವ ಪ್ರತಿಕ್ರಿಯೆ, ಪರಿಣಾಮಗಳನ್ನು ಪ್ರಕಟಿಸಿ ಸಂಶೋಧನೆಯು ತನ್ನದೇ ಆದ ದಿಶೆಯಲ್ಲಿ ನಡೆಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಶಿಬಿರಗಳಲ್ಲಿ ಮಾತ್ರವೇ ಅಲ್ಲದೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕವೂ ಈ ಔಷಧದ ವಿತರಣೆಗೆ ಅನುಕೂಲ ಮಾಡಿಕೊಡಲಾಗಿದೆ. ಇದಲ್ಲದೆ ನಗರ ಪ್ರದೇಶಗಳಲ್ಲಿ ಸಹ ಈ ಔಷಧದ ವಿತರಣೆಗೆ ಸಾಕಷ್ಟು ಉತ್ತೇಜನ ಕೊಟ್ಟು ಮಹಿಳೆಯರು ಇದರ ಪ್ರಯೋಜನ ಪಡೆಯುವಂತಹ ಯೋಜನೆಗಳನ್ನು ಹಾಕಿ ಕೊಡಿದೆ. ಈ ಔಷಧದ ಪರಿಣಾಮ ಆರು ತಿಂಗಳುಗಳಿಂದ ಹನ್ನೆರಡು ತಿಂಗಳುಗಳವರೆಗೆ ಸೀಮಿತವಾಗಿದ್ದರೂ ಅದರಿಂದ ಉಂಟಾಗುವ ದುಷ್ಪರಿಣಾಮಗಳು ಅನೇಕ: ಮಹಿಳೆಯರು ಈ ಚುಚ್ಚು ಮದ್ದಿನ ಔಷಧ ಪಡೆಯುವುದರಿಂದ ಕಾಮಾಲೆ, ತೀವ್ರ ರಕ್ತಸ್ರಾವ, ಋತುಚಕ್ರ ಬದಲಾವಣೆ ಮೊದಲಾದ ರೋಗಗಳಿಗೆ ತುತ್ತಾಗುತ್ತಾರೆಂದು ಅನೇಕ ಸಂಶೋಧನೆಗಳಿಂದ ಕಂಡು ಬಂದಿದೆ.

ಈ ಸಂಶೋಧನೆಯ ದುಷ್ಪರಿಣಾಮದ ಬಗ್ಗೆ ಅಲ್ಲಲ್ಲಿ ಅನೇಕ ಸಂಘ-ಸಂಸ್ಥೆಗಳಿಂದ ಪ್ರತಿಭಟನೆ ಕಂಡು ಬಂದಿದೆಯಾದರೂ, ಇನ್ನೂ ಹೆಚ್ಚಿನ ವ್ಯಾಪಕ ಪ್ರತಿಭಟನೆ ಮತ್ತು ಜಾಗೃತಿ ಮೂಡಿ ಬರಬೇಕಾಗಿದೆ.

—ಉಷಾ ರಾಮಕುಮಾರ್